# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:211 • ನೋಂದಣಿ ನಂ.:KARKAN27911 • ವಿಜಯನಗರ • 16.01.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:211 • Reg.No:KARKAN27911 • VIJAYANAGARA • 16.01.2024 • Tuesday • Page:04 • Rs:2




## ಮೈಕ್ರೋ ನ್ಯೂಸ್

### ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಚನ್ನಬಸವನಗೌಡ ಪಾಟೀಲ್ ನೇಮಕ

**ಹಂಪಿ ಟೈಮ್ಸ್ ಹೊಸಪೇಟೆ**
ಬಿಜೆಪಿ ವಿಜಯನಗರ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಚನ್ನಬಸವನಗೌಡ ಪಾಟೀಲ್ ನೇಮಕಗೊಂಡಿದ್ದಾರೆ.



ಪಕ್ಷ ನಿಷ್ಠೆ ಮತ್ತು ಸಂಘಟನೆಯಲ್ಲಿ ಸಕ್ರಿಯವಾಗಿರುವುದರಿಂದ ಮತ್ತೊಮ್ಮೆ ವಿಜಯನಗರ ಜಿಲ್ಲಾಧ್ಯಕ್ಷರನ್ನಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇಮಕಗೊಳಿಸಿರುವುದು ಯುವ ಕಾರ್ಯಕರ್ತರಲ್ಲಿ ಹರ್ಷ ಹೆಚ್ಚಿಸಿದೆ.

### ಜ.18 ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ

**ಹಂಪಿ ಟೈಮ್ಸ್ ಹೊಸಪೇಟೆ**
ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ವಿಜಯನಗರ ಜಿಲ್ಲಾ ಶಾಖೆವತಿಯಿಂದ ಜ.18 ರಂದು ವಿಜಯನಗರ ಕಾಲೇಜು ಗ್ರಂಥಾಲಯದ ಆವರಣದ ಸುವರ್ಣ



ಭವನದಲ್ಲಿ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆ, 2022 – 23ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಾಗಾರ ಹಾಗೂ 126 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ವಿಜಯನಗರ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ತಿಳಿಸಿದ್ದಾರೆ.

ನೌಕರರ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಆಗಮಿಸಲಿದ್ದಾರೆ. ಶಾಸಕ ಹೆಚ್.ಆರ್.ಗವಿಯಪ್ಪ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರೇರಣಾ ನುಡಿಗಳಾಡಲಿದ್ದಾರೆ. ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನಗೌಡ ಅಧ್ಯಕ್ಷತೆವಹಿಸುವರು. ಜಿಲ್ಲಾ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜಿಲ್ಲೆಯ ಸಮಸ್ತ ಸರಕಾರಿ ನೌಕರ ಬಾಂಧವರು ಉಪಸ್ಥಿತರಿರುವರು.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.
> ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ಒಳ ಪುಟಗಳಲ್ಲಿ

**ಮಣ್ಣಿನ ಮಗ ಕುಸ್ತಿಯ ಮಲ್ಲ ರಫೀಕ್ ಹೊಳಿ**
– ಡಾ.ಸುಧಾಕರ ಜಿ.ಲಕ್ಕವಳ್ಳಿ
ಪುಟ 2 ರಲ್ಲಿ ಓದಿ

**ಹೊಸಿಲು ದಾಟಿದ ಹೆಣ್ಣು**
– ವೀಣಾ ಹೇಮಂತಗೌಡ ಪಾಟೀಲ್,
ಪುಟ 3 ರಲ್ಲಿ


**ಎಸ್ಟಿ ಸೇರ್ಪಡೆಗೆ ಅಂಬಿಗ ಸಮುದಾಯ ಅರ್ಹ**
– ಮುಖ್ಯಮಂತ್ರಿ ಸಿದ್ದರಾಮಯ್ಯ
ಪುಟ 2 ರಲ್ಲಿ


# ಹಂಪಿಯಲ್ಲಿ ಸಂಕ್ರಾಂತಿ ಸಂಭ್ರಮ

## ಇದ್ದ ನೀರಲ್ಲೆ ಮಿಂದೆದ್ದು ದೇವರ ದರ್ಶನ ಪಡೆದ ಭಕ್ತರು | ಹಂಪಿಯಲ್ಲಿ ಎಲ್ಲೆಲ್ಲೂ ಪ್ರವಾಸಿಗರು









**ಹಂಪಿ ಟೈಮ್ಸ್ ಹೊಸಪೇಟೆ:** ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಗೆ ಧನುರ್ಮಾಸದ ಕೊನೆಯ ಪೂಜೆಯನ್ನು ಸೋಮವಾರದ ಸೂರ್ಯೋದಯಕ್ಕೂ ಮುನ್ನ ಅರ್ಚಕರು ನೆರವೇರಿಸಿ, ಸೂರ್ಯೋದಯದ ನಂತರ ಮಕರ ಸಂಕ್ರಮಣದ ವಿಶೇಷ ಅಭಿಷೇಕ, ಪುಷ್ಪಗಳಿಂದ ಅಲಂಕರಿಸಿ ಪೂಜೆ ನೇರವೇರಿಸದರು.

ದಕ್ಷಿಣ ಕಾಶಿ ಧಾಮಿಕ ಕ್ಷೇತ್ರ ಹಂಪಿಯಲ್ಲಿ ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿಯಂದು ಹಂಪಿ ಅಧಿದೈವ ಶ್ರೀ ಪಂಪಾವಿರೂಪಾಕ್ಷೇಶ್ವರಸ್ವಾಮಿ, ತಾಯಿ ಭುವನೇಶ್ವರಿ, ಮಾತೆ ಪಂಪಾಂಬಿಕೆ ದರ್ಶನಕ್ಕಾಗಿ ವಿಜಯನಗರ ಜಿಲ್ಲೆ ಸೇರಿದಂತೆ ನಾಡಿನ ವಿವಿಧ ಭಾಗಗಳಿಂದ ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಹಂಪಿಗೆ ಆಗಮಿಸಿ, ತುಂಗಭದ್ರಾ ನದಿಯಲ್ಲಿ ಇದ್ದ ಅಲ್ಪ ನೀರಿನಲ್ಲೆ ಭಕ್ತಿಯಿಂದ ಮಿಂದೆದ್ದು ಬೆಳಿಗ್ಗೆಯಿಂದಲೇ ಸಾಲುಗಟ್ಟಿನಿಂತು ದೇವರ ದರ್ಶನ ಪಡೆದರು.

ಶಕ್ತಿ ಯೋಜನೆಯ ಉಚಿತ ಬಸ್ ಸೌಕರ್ಯ ಹಾಗೂ ಸಾಲು ಸಾಲು ರಜೆಗಳ ನಡೆಗೆ ಬಂದಿರುವ ಮೊದಲ ಮಕರ ಸಂಕ್ರಾಂತಿ ಹಬ್ಬ ಪ್ರವಾಸಿಗರು ಮತ್ತು ಭಕ್ತರಲ್ಲಿ ಸಂತಸ ಹೆಚ್ಚಿಸಿತ್ತು. ದೇವಸ್ಥಾನದ ಪಕ್ಕದಲ್ಲಿ ಹರಿಯುವ ನದಿಯಲ್ಲಿ ಸ್ನಾನ ಮಾಡಿ ದೇವರ ದರ್ಶನ ಪಡೆದರು. ನಂತರ ಹಂಪಿ ಎದುರುಬಸವಣ್ಣ, ಕೋದಂಡರಾಮ ದೇವಸ್ಥಾನ, ಯಂತ್ರೋದ್ಧಾರಕಸ್ವಾಮಿ, ವಿಜಯವಿಠಲ ದೇಗುಲ, ಕಲ್ಲಿನ ತೇರು, ಸಾಸಿವೆಕಾಳು– ಕಡಲೆಕಾಳು ಗಣೇಶ, ಶ್ರೀಕೃಷ್ಣ ದೇವಸ್ಥಾನ, ಉಗ್ರನರಸಿಂಹ, ಬಡವಿಲಿಂಗ, ಉದ್ದಾನ ವೀರಭದ್ರ ದೇವಸ್ಥಾನ, ಭೂಮಿಮಟ್ಟದ ದೇವಸ್ಥಾನ, ಕಮಲ ಮಹಲ್, ಗಜಶಾಲೆ, ಮಹಾನವಮಿ ದಿಬ್ಬ ಹಾಗೂ ರಾಣಿಸ್ನಾನಗೃಹಗಳ ವೀಕ್ಷಿಸಿ, ಮೊಬೈಲ್‌ಗಳಲ್ಲಿ ಸ್ಮಾರಕಗಳ ಜೊತೆ ಸೆಲ್ಫಿ ತೆಗದುಕೊಂಡು ಸಂಭ್ರಮಿಸಿದರು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರಿಂದ ಸಣ್ಣ ವ್ಯಾಪಾರಿಗಳ ವ್ಯಾಪಾರ ಉತ್ತಮವಾಗಿತ್ತು. ಮಕರ ಸಂಕ್ರಮಣಕ್ಕೆ ಎಲ್ಲೆಡೆಗಳಿಂದ ಪ್ರವಾಸಿಗರು ಆಗಮಿಸಿದ್ದರಿಂದ ಹೊಸಪೇಟೆ ನಗರ ಸೇರಿದಂತೆ ಸುತ್ತಮುತ್ತಲಿರುವ ಹೋಟೆಲ್ ವಸತಿ ರೂಂಗಳು ಭರ್ತಿಯಾಗಿದ್ದರಿಂದ ಅನೇಕ ವಸತಿಗಾಗಿ ಪರದಾಡಿದರು.



# 2 ಕೋಟಿ ವೆಚ್ಚದಲ್ಲಿ ಭವನ ನಿರ್ಮಾಣ

## ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಹೇಳಿಕೆ | ಸುಸಜ್ಜಿತವಾದ ಭೋವಿ ಸಮುದಾಯ ಭವನ



**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ಸುಸಜ್ಜಿತವಾದ ಭೋವಿ ಸಮುದಾಯ ಭವನವನ್ನು ಅಂದಾಜು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದು ಯುವಜನ ಸಬಲೀಕರಣ, ಕ್ರೀಡಾ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ರಾಘವ ಕಲಾಮಂದಿರದಲ್ಲಿ ಏರ್ಪಡಿಸಿದ್ದ 852ನೇ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಸಿದ್ಧರಾಮೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಭೋವಿ ಸಮುದಾಯ ಭವನ ನಿರ್ಮಾಣ ಮಾಡಿಕೊಡಲಾಗುವುದು. >>>4

# ಜಾಗೃತಿಗಾಗಿ ಜಾತ್ರಾ ಮಹೋತ್ಸವ

## ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಶ್ರೀ ಹೇಳಿಕೆ



**ಹಂಪಿ ಟೈಮ್ಸ್ ಹರಿಹರ:** ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆವರಣದಲ್ಲಿ ಪ್ರತಿವರ್ಷ ಆಚರಣೆ ಮಾಡುತ್ತಿರುವ ಹರ ಜಾತ್ರಾ ಮಹೋತ್ಸವದಿಂದಾಗಿ ಸಮಾಜವನ್ನು ಜಾಗೃತಿ ಮಾಡಲಾಗುತ್ತಿದೆಯೇ ವಿನಹ ಸಮಾಜವನ್ನು ಒಡೆಯುವ ಕೆಲಸವನ್ನು ಮಾಡುತ್ತಿಲ್ಲ ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು. >>4

# ಹೊಟ್ಟೆಪಾಡಿನ ಕೆಲಸಗಳು ಇತರರಿಗೆ ಫಲಪ್ರದವಾಗಿರಲಿ

## ಆರ್ಯ ಈಡಿಗ ಸೋಲೂರು ಮಹಾಸಂಸ್ಥಾನದ ಪೀಠಾಧಿಪತಿ ವಿಖ್ಯಾತಾನಂದ ಶ್ರೀಗಳ ಆಶೀರ್ವಚನ | ವಿ.ಎನ್.ರಾಯಲ್ ಗಾರ್ಡನ್ ಫಂಕ್ಷನ್ ಹಾಲ್ ಉದ್ಘಾಟನೆ




**ಹಂಪಿ ಟೈಮ್ಸ್ ಹೊಸಪೇಟೆ**
ನಮ್ಮ ಹೊಟ್ಟೆಪಾಡಿಗಾಗಿ ಮಾಡುವ ಕೆಲಸ ಕಾರ್ಯಗಳೆಲ್ಲವೂ ಇತರರಿಗೆ ಫಲಪ್ರದವಾಗಬೇಕು. ಜೀವಿತಾವಧಿಯಲ್ಲಿ ಸತ್ಕಾರ್ಯಗಳನ್ನೇ ಮಾಡಿಕೊಂಡು ಹಂತ ಹಂತವಾಗಿ ಅಭಿವೃದ್ಧಿ ಹೊಂದುತ್ತ ಸಮಾಜದ ಏಳ್ಗೆಯಲ್ಲಿ ಪಾಲುದಾರರಾಗುತ್ತ ಸಮಾಜಕ್ಕೆ ಉದ್ಯೋಗ ಸೃಷ್ಠಿಯ ಜೊತೆಗೆ ಅನೇಕರ ಅಗತ್ಯತೆಗೆ ತಕ್ಕ ಭವ್ಯ ಫಂಕ್ಷನ್ ಹಾಲ್ ನಿರ್ಮಿಸಿರುವ ವಸಂತಿ ನಾರಾಯಣ ಅವರ ಕಾರ್ಯ ಶ್ಲಾಘನೀಯ ಎಂದು ಆರ್ಯ ಈಡಿಗ ಸೋಲೂರು ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ವಿಖ್ಯಾತಾನಂದ ಗುರುಗಳು ಆಶೀರ್ವಚನ ನೀಡಿದರು.

ನಗರದ ಮೀರಲಂ ಚಿತ್ರಮಂದಿರ ಹಿಂಬಾಗದಲ್ಲಿ ನೂತನವಗಿ ನಿರ್ಮಿಸಿದ ವಿ.ಎನ್.ರಾಯಲ್ ಗಾರ್ಡನ್ ಫಂಕ್ಷನ್ ಹಾಲ್ ಭಾನುವಾರ ಉದ್ಘಾಟಿಸಿ ಮಾತನಾಡಿದರು. ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಎಂದೂ ಯಾರನ್ನೂ ನೋಯಿಸದೆ ಬದುಕು ಸಾಗಿಸಬೇಕು. ಸ್ವರ್ಗಕ್ಕೆ ಹೋಗಬೇಕೆಂಬ ಬಯಕೆ ಇದ್ದರೆ ಸಾಲದ ಅದರ ಜೊತೆಗೆ ಸಮಾಜಮುಖಿ ಇತರರಿಗೆ ಉಪಯೋಗವಾಗುವ ಸತ್ಕಾರ್ಯಗಳನ್ನು ಮಾಡುವ ಮೂಲಕ ಸಮಾಜಕ್ಕೂ ಹಾಗೂ ದೇವರಿಗೆ ಹತ್ತಿರವಾಗಬೇಕು ಎಂದರು.

ಕಿರ್ಲೋಸ್ಕರ್ ಸಂಸ್ಥೆಯ ಎಂಡಿ ಗುಮಾಸ್ತೇ ಮಾತನಾಡಿ, ವ್ಯಕ್ತಿಯ ನಿರಂತರ ಪರಿಶ್ರಮವೇ ಉನ್ನತಕ್ಕೇರಲು ಸಹಕಾರಿಯಾಗುತ್ತದೆ. ಮನುಷ್ಯ ಸಂಘಜೀವಿಯಾಗಿ ಸಮಯಪ್ರಜ್ಞೆ ರೂಢಿಸಿಕೊಂಡು ಮತ್ತೊಬ್ಬರಿಗೆ ನೆರವಾಗುವ ಕಾಯಕಗಳಿಂದ ವ್ಯಕ್ತಿಗಳ ಮನದಲ್ಲಿ ಶಾಶ್ವತವಾಗಿ ನೆಲಸಬಹುದಾಗಿದೆ. ಅಂತಹ ಕಾಯಕದಲ್ಲಿ ಎ.ನಾರಾಯಣ ಅವರ ಕುಟುಂಬ ಶ್ರಮಿಸುತ್ತಿದೆ ಎಂಬುದಕ್ಕೆ ಅವರ ಈ ಅಭಿವೃದ್ಧಿ ಕಾರ್ಯಗಳೇ ಸಾಕ್ಷಿ ಎಂದರು.

ಜೆಡಿಎಸ್ ಯುವ ನಾಯಕರಾದ ಬಾಲರಾಜ್ ಗುತ್ತೇದಾರ್, ಕಾಂಗ್ರೆಸ್ ಮುಖಂಡ ಮೊಹ್ಮದ ಇಮಾಮ್ ನಿಯಾಜಿ, ಸಿಎ ಸೈಯದ್ ಮಹಮ್ಮದ್, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಕೊಟ್ರೇಶ್ ಮಾತನಾಡಿದರು.

ಉದ್ಯಮಿಗಳಾದ ಬಸವರಾಜ್ ಇಳಿಗೆರ್, ಚಂದ್ರಶೇಖರ್, ಖಾಜನ ಗೌಡ, ವೆಂಕಟೇಶ್ ಕೊಪ್ಪಳ, ಜಗದೀಶ್ ಗೌಡ, ರಾಘವೇಂದ್ರ, ಪ್ರಸಾದ್ ,ಕುಮಾರ್, ರಾಘವೇಂದ್ರ ಹಾನಗಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.. ಶಾಲಿನಿ ಹೆಬ್ಬಾರ್ ಅವರ ಭರತನಾಟ್ಯ ತಂಡ ನೂತನ ಫಂಕ್ಷನ್ ಹಾಲ್‌ನಲ್ಲಿ ಸೀತಾರಾಮ ಕಲ್ಯಾಣ ಸೇರಿದಂತೆ ಭರತನಾಟ್ಯದ ವಿವಿದ ಕಲಾ ರೂಪಕಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚಗೆಗೆ ಪಾತ್ರರಾದರು. ಅಶೋಕ್ ಪೂಜಾರಿ ಸ್ವಾಗತಿಸಿದರು. ಮಧುಸೂದನ್ ನಿರೂಪಿಸಿದರು

> ಹೊಸಪೇಟೆ ಜಿಲ್ಲಾ ಕೇಂದ್ರವಾದ ನಂತರ ರಾಜ್ಯಮಟ್ಟದ ಚಟುವಟಿಕೆಗಳು ಜಿಲ್ಲಾ ಕೇಂದ್ರದಲ್ಲೆ ನಡೆಯುತ್ತಲಿವೆ. ಹಂಪಿ ಉತ್ಸವ ಸೇರಿದಂತೆ ನಾನಾ ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಹೊಸಪೇಟೆಯಲ್ಲಿ ವಸತಿ ಸೌಲಭ್ಯದ ಕೊರತೆ ಎದುರಿಸಲಾಗುತ್ತಿದೆ. ಇಂತಹ ಅನೇಕ ಭವ್ಯ ಹಾಲ್‌ಗಳು ವಸತಿ ರೂಂಗಳು ನಿರ್ಮಾಣ ಮಾಡಿದಾಗ ಉದ್ಯೋಗ ಸೃಷ್ಠಿಯ ಜೊತೆಗೆ ಜಿಡಿಪಿ ಹೆಚ್ಚಳಕ್ಕೂ ಸಹಕಾರಿಯಾಗಲಿದೆ.
> – ಸೈಯದ್ ಮಹ್ಮದ್, ಸಿಎ, ಹೊಸಪೇಟೆ.



## ವಚನ ಅರಿವು

### ದೇಹ ನಂಬಿ ಕೆಡಬೇಡ

**ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,**
**ಎಲುವಿನ ತಡಿಕೆ, ಕೀವಿನ ಹಡಿಕೆ**
**ಸುಡಲೀ ದೇಹವ; ಒಡಲುವಿಡಿದು ಕೆಡದಿರು,**
**ಚೆನ್ನಮಲ್ಲಿಕಾರ್ಜುನನರಿಯದ ಮರುಳೆ.**

**– ಅಕ್ಕಮಹಾದೇವಿ**

ಹೊಲಸು ತುಂಬಿರುವ ಗಡಿಗೆ ಈ ದೇಹ. ಇದರ ಸುತ್ತ ಎಲುಬು, ತೊಗಲಿನ ಜೋಡಣೆ ಇದೆ. ಕೀವು ತುಂಬಿರುವ ಮಾಂಸದ ಮುದ್ದೆ. ಇದರ ಮೇಲೆ ಮೋಹ ಏಕೆ ಎನ್ನುತ್ತಾಳೆ ಅಕ್ಕ. ಈ ದೇಹದ ಕೀಲಿ ಮನಸ್ಸು. ಮನಸ್ಸಿನಲ್ಲಿ ಕಾಮ, ಆಸೆ, ಬಯಕೆ ತುಂಬಿಕೊಂಡು ಹುಚ್ಚನಂತೆ ಈ ದೇಹವನ್ನು ಬಳಸಿಕೊಂಡು ದಾರಿತಪ್ಪಬೇಡ. ಇದು ಪ್ರಕೃತಿ ಸಹಜ ಎಂಬುದನ್ನು ತಿಳಿದು ಬದುಕಿದರೆ ಇದರ ಮೇಲೆ ಅತಿ ಮೋಹ ಉಂಟಾಗುವುದಿಲ್ಲ. ದೇಹದ ಮೇಲಿನ ಅತಿ ಮೋಹ, ಆಸೆಯನ್ನು ಸುಟ್ಟು ಹಾಕಿದರೆ ಅರಿವಿನ ದಾರಿ ಕಾಣುತ್ತದೆ. ಶಿವನ ಒಲುಮೆ ಸಿಗುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಕೊಟ್ಟೂರೇಶ್ವರ ಪಿಎಲ್ಡಿ ಬ್ಯಾಂಕ್ ಫಲಿತಾಂಶ ಘೋಷಣೆ

**ಹಂಪಿ ಟೈಮ್ಸ್ ಕೊಟ್ಟೂರು**

ಕೂಡ್ಲಿಗಿ ತಾಲೂಕು ಶ್ರೀ ಕೊಟ್ಟೂರೇಶ್ವರ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಕೊಟ್ಟೂರು ಆಡಳಿತ ಮಂಡಳಿಯ 13 ಸ್ಥಾನಕ್ಕೆ,12 ಜನ ನಿರ್ದೇಶಕರು ಚುನಾಯಿತರಾಗಿದ್ದಾರೆ ಎಂದು ತಹಶಿಲ್ದಾರು ಹಾಗೂ ರಿಟರ್ನಿಂಗ್ ಅಧಿಕಾರಿಗಳು ಅಮರೇಶ್ ಜಿ.ಕೆ ಘೋಷಿಸಿದರು.

ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ 4 ಕ್ಷೇತ್ರಕ್ಕೆ ಚುನಾವಣೆ ನಡೆದಿದ್ದು, ಆಲೂರು ಕ್ಷೇತ್ರಕ್ಕೆ ಕಾನೂನು ತಡೆಯಾಜ್ಞೆ ಬಂದಿರುವ ಕಾರಣ ಆ ಕ್ಷೇತ್ರ ಬಿಟ್ಟು ಉಳಿದ 3 ಕ್ಷೇತ್ರಗಳ ಚುನಾಯಿತ ಅಭ್ಯರ್ಥಿಗಳ ಮತ್ತು ಅವಿರೋಧವಾಗಿ ಆಯ್ಕೆಗೊಂಡ 9 ಅಭ್ಯರ್ಥಿಗಳ ಫಲಿತಾಂಶವನ್ನು ಘೋಷಿಸಿದರು.

ಅಮರೇಶ್ ಜಿ.ಕೆ ತಹಶಿಲ್ದಾರರು ಹಾಗೂ ರಿಟರ್ನಿಂಗ್ ಅಧಿಕಾರಿಗಳು ಬಿಗಿ ಭದ್ರತೆಯಲ್ಲಿ ಚುನಾವಣೆ ಪ್ರಕ್ರಿಯೆಯು ಶಾಂತತೆಯಿಂದ ನಡೆಯಿತು.

ಸಾಲಗಾರರ ಕ್ಷೇತ್ರದಲ್ಲಿ ಕ್ರಮವಾಗಿ ಕೊಟ್ಟೂರು ಕ್ಷೇತ್ರಕ್ಕೆ–ಎಂ.ಎಸ್.ಪಂಕಜ,ಹ್ಯಾಳ್ಯಾ ಕ್ಷೇತ್ರಕ್ಕೆ– ಡಿ.ನಾಗೇಶ್,ಉಜ್ಜಿನಿ ಕ್ಷೇತ್ರಕ್ಕೆ–ಬಿ.ಡಿ.ಸೋಮಣ್ಣ,ಹೊಸಹಳ್ಳಿ ಕ್ಷೇತ್ರಕ್ಕೆ–ಎ.ಆರ್. ಚಂದ್ರಶೇಖರಯ್ಯ,ಗುಡೇಕೋಟೆ ಕ್ಷೇತ್ರಕ್ಕೆ–ಡಾ.ಜಿ.ಕೆ. ಜಯಾನಂದ,ಹೂಡೇಂ ಕ್ಷೇತ್ರಕ್ಕೆ– ಎ.ಲೋಕರಾಜ್,ಬಡೇಲಡುಕು ಕ್ಷೇತ್ರಕ್ಕೆ–ಸಿದ್ದೇಶ್ವರ ಜಿ. ಆರ್.ಸೂಲದಹಳ್ಳಿ ಕ್ಷೇತ್ರಕ್ಕೆ–ಕೆ.ಸಿದ್ದಪ್ಪ,ಮಾಕನಡುಕು ಕ್ಷೇತ್ರಕ್ಕೆ–ಟಿ.ಬಸವೇಶ್ವರ,ಕೂಡ್ಲಿಗಿ ಕ್ಷೇತ್ರಕ್ಕೆ–ಕೆ.ಶಿವಪ್ಪ. ಹಾಗೂ ಸಾಲಗಾರರಲ್ಲದ ಕ್ಷೇತ್ರಕ್ಕೆ ಕ್ರಮವಾಗಿ ಕೊಟ್ಟೂರು ಕ್ಷೇತ್ರಕ್ಕೆ–ಪಿ. ಹೆಚ್.ರಾಘವೇಂದ್ರ,ಕೂಡ್ಲಿಗಿ ಕ್ಷೇತ್ರಕ್ಕೆ–ಆರ್.ಎಂ ಸರಮಸ್ ಹುಸೇನ್ ಒಟ್ಟು 12 ಜನ ನಿರ್ದೇಶಕರ ಹೆಸರನ್ನು ಘೋಷಿಸಿದ್ದಾರೆ.

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

## ಮಣ್ಣಿನ ಮಗ, ಸೇನಾನಿ, ಗ್ರಿಕೋ ರೋಮನ್

# ಕುಸ್ತಿಯ ಮಲ್ಲ ರಫೀಕ್ ಹೋಳಿ

**ಹಂಪಿ ಟೈಮ್ಸ್ ಕ್ರೀಡಾ ಸಾಧಕರ ಪರಿಚಯ**

ಕ್ರೀಡೆ ಎಂದರೇನೆ ಹಾಗೆ ಅದು ಎಲ್ಲರನ್ನೂ ತನ್ನತ್ತ ಸೆಳೆಯುವ ಗುಣ ಹೊಂದಿದೆ ಅದರಲ್ಲೂ ವಿದ್ಯಾ ಕಾಶಿ ಧಾರವಾಡ ಎಂದರೆ ಕೇಳಬೇಕೆ? ಜಾಣರೊಂದಿಗೆ ಪೈಲ್ವಾನರನ್ನು ತಯಾರಿಸುವ ಕಾರ್ಖಾನೆಯಂತಿದೆ ಸಾಕಷ್ಟು ಹೆಸರಾಂತ ಪೈಲ್ವಾನರನ್ನು ನಾಡಿಗೆ ನೀಡಿದ ಕೀರ್ತಿ ಈ ಪವಿತ್ರ ಸ್ಥಳಕ್ಕೆ ಸಲ್ಲುತ್ತದೆ.

'ಧಾರವಾಡ ಎಂದರೆ ಪೇಡ, ಪೇಡ ಬೇಡ ಎಂದವನಿಲ್ಲ ನೋಡ' ಎಂಬಂತೆ ಸೇನೆಯಲ್ಲಿ ಸೇವೆಯೊಂದಿಗೆ, ತನ್ನ ದೇಶಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕ ದೊರಕಿಸಿ ಭಾರತಮಾತೆಯ ಕೀರ್ತಿ ಪತಾಕೆಯನ್ನು ಹಾರಿಸುತ್ತಿರುವವನೇ ನಮ್ಮ ಲೇಖನದ ನಾಯಕ ರಫೀಕ್ ಹೋಳಿ.

ಈ ಹಿಂದೆ ನನ್ನದೊಂದು ಕುಸ್ತಿ ಪುಸ್ತಕಕ್ಕೆ ಛಾಯಾಚಿತ್ರದ ಸಲುವಾಗಿ ಮೈಸೂರಿನ ಹೆಸರಾಂತ ಪೈಲ್ವಾನ್ ಉಪೇಂದ್ರ ಕಾರ್ತಿಕ್ರಿಂದ ಪರಿಚಯವಾದ ಇವರು ಇಂದಿಗೂ ಗೌರವದೊಂದಿಗೆ ಸ್ನೇಹದಿಂದಿದ್ದಾರೆ.

ಕುಸ್ತಿ ಅಖಾಡವೇ ಹಾಗೆ ತನ್ನೊಡಲೊಳಗೆ ಪಳಗಿದವರಿಗೆ ಮಾತೃತ್ವ ಭಾವ ಬೆಸೆದು ಎಲ್ಲರಲ್ಲೂ ದೈವತ್ವ ಕಾಣುವ ವಾತ್ಸಲ್ಯ ಅವರ ಹೃದಯದಲ್ಲಿ ನೆಲೆಯೂರುವಂತೆ ಮಾಡುತ್ತದೆ.

ಧಾರವಾಡ ಜಿಲ್ಲೆ ಶಿಂಗನಹಳ್ಳಿ ಪುಟ್ಟ ಗ್ರಾಮ ರೈತಾಪಿ ರಾಜೇಸಾಬ ಮತ್ತು ಫಾತಿಮಾ ರವರ 10 ಮಕ್ಕಳಲ್ಲಿ ರಫಿಕ್ ಒಂಭತ್ತನೆಯವರು ಇವರ ಇಡೀ ಕುಟುಂಬವೇ ಕ್ರೀಡಾ ಕುಟುಂಬ ತಂದೆ ಕುಸ್ತಿಯ ಆಸಕ್ತಿ ಹೊಂದಿದ್ದು ಸುತ್ತಮುತ್ತ ಹಳ್ಳಿಗಳಲ್ಲಿ ಕುಸ್ತಿ ಮಾಡುತ್ತಾ ತನ್ನ ಮಕ್ಕಳನ್ನು ಕುಸ್ತಿ ಮೈದಾನಕ್ಕೆ ಕರೆದೊಯ್ಯುತ್ತಿದ್ದರು. ತಾನು ಹೇಳಿಕೊಳ್ಳುವ ಸಾಧನೆ ಮಾಡದಿದ್ದರೂ ಸಹ ನನ್ನ ಮಕ್ಕಳು ಸಾಧಿಸಬೇಕೆಂಬ ಆಸೆ ಅವರಲ್ಲಿ ಇತ್ತು ಅದರಲ್ಲಿ ಅವರ 3ನೇ ಮಗ ರೆಹಮಾನ್ ಹೋಳಿ ರಾಷ್ಟ್ರಮಟ್ಟದ ಹೆಸರನ್ನು ಗಳಿಸಿದ್ದಾರೆ. ಇವರಿಂದ ಪ್ರೇರೇಪಿತರಾದ ರಫಿಕ್ ತನ್ನ ಅಣ್ಣನೊಂದಿಗೆ ಅಭ್ಯಾಸಕ್ಕೆ ಹೋದಂತಹ ಸಂದರ್ಭಗಳಲ್ಲಿ ಮಣ್ಣಿನಲ್ಲಿ ಹೊರಳಾಡುವ ಮನರಂಜನಾ ಕಾರಣಕ್ಕಾಗಿ ಕುಸ್ತಿ ಅಖಾಡಕ್ಕೆ ಹೋಗುತ್ತಿದ್ದೆ ನನಗೆ ಅಷ್ಟೇನೂ ಆ ವಯಸ್ಸಿನಲ್ಲಿ ಆಸಕ್ತಿ ಇರಲಿಲ್ಲ ಎಂದು ಹೇಳುತ್ತಾರೆ. ತಮ್ಮ ಐದನೇ ವಯಸ್ಸಿನಲ್ಲಿ ಸಿಂಗನಹಳ್ಳಿಯ ಗರಡಿಮನೆ ಪ್ರವೇಶಿಸಿದಾಗಿ ಹೇಳುತ್ತಾ ತಮ್ಮ 1ನೇ ತರಗತಿಯನ್ನು ಅಲ್ಲೇ ಮುಗಿಸಿ 2 ರಿಂದ 6ನೇ ತರಗತಿಗಾಗಿ ಓದಲು ಧಾರವಾಡಕ್ಕೆ ಬರುತ್ತಾರೆ ತಂದೆಯ ಅಣತಿಯಂತೆ ಅಣ್ಣ ಜ್ಯೋತಿ ತಾಲಿಂಗೆ ಸೇರಿ ತನ್ನೊಂದಿಗೆ ತನ್ನ ತಮ್ಮನನ್ನು ಕರೆದುಕೊಂಡು ಹೋಗುತ್ತಾರೆ.

ಅಂದಿನ ದಿನಗಳಲ್ಲಿ ಇವರಿಗೆ ಇವರ ಅಣ್ಣನೇ ಉಸ್ತಾದ್ ಇದರೊಂದಿಗೆ ಜಿನ್ನಪ್ಪ ಕುಂದುಗೋಳ, ಎಸ್,ವಿ ಪಾಟೀಲ್ ಸರ್ ಜೊತೆಗೂಡಿ ಪಟ್ಟುಗಳನ್ನು ಕಲಿಸಿದರು.

ಮುಂದೆ 7–10ನೇ ತರಗತಿ ಓದುವ ಸಂದರ್ಭ 7ನೇ ತರಗತಿಯಲ್ಲಿದ್ದಾಗ ಬೆಳಗಾವಿಯ ಕ್ರೀಡಾ ಶಾಲೆಗೆ ಆಯ್ಕೆಗೊಳ್ಳುತ್ತಾರೆ ಅಂದಿನ ಹೆಸರಾಂತ ತರಬೇತುದಾರರಾದ ಕೆ, ಎಂ,ಪಾಟೀಲ್ ರವರು, ಮಂಜುನಾಥ್ ಹಳಿಯಾಳ, ತುಕಾರಾಮ ಗೌಡಾ, ನಾಗರಾಜ್ ಶಿವಮೊಗ್ಗ ಹನುಮಂತ ಪಾಟೀಲ ಇವರೆಲ್ಲರಿಂದ ಹೆಚ್ಚಿನೂ ಪಟ್ಟುಗಳನ್ನು 04 ವರ್ಷ ತರಬೇತಿ ಅವಧಿಯಲ್ಲಿ ಮೈಗೂಡಿಸಿಕೊಳ್ಳುತ್ತಾರೆ.

ಇವರ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣದ ಅವಧಿಯಲ್ಲಿ ಹೆಚ್ಚಿನ ಕ್ರೀಡಾ ಸಾಧನೆಯನ್ನು ಮಾಡದಿದ್ದರೂ ಸಹ ಮುಂದೆ ಬೇಕಾದಂತಹ ದೈಹಿಕ ಸದೃಢತೆಯನ್ನು ಹೊಂದುವಲ್ಲಿ ಸಫಲರಾದರು.

ತಮ್ಮ ಪದವಿಪೂರ್ವ ಶಿಕ್ಷಣವನ್ನು ದಾವಣಗೆರೆ ಇಲ್ಲಿ ಆರಂಭಿಸಿ ಕುಸ್ತಿ ಕ್ರೀಡಾ ನಿಲಯದ ಶಿವಾನಂದ್ ಇವರ ಬಳಿ ತರಬೇತಿ ಪಡೆಯಲು ಆರಂಭಿಸುತ್ತಾರೆ.

ತಾನು ಪ್ರಾಥಮಿಕ ಶಿಕ್ಷಣ ಪಡೆಯುವಾಗನಿಂದಲೂ ಮತ್ತು ಗರಡಿ ಮನೆಗಳಲ್ಲಿ ಕುಸ್ತಿ ಕಲಿಯುವಾಗ ಕಲಿಸುತ್ತಿದ್ದ ಮತ್ತು ತರಬೇತಿ ಹೊಂದುತ್ತಿದ್ದ ಎಲ್ಲಾ ಪೈಲ್ವಾನರುಗಳು ನನಗೆ ರೋಲ್ ಮಾಡೆಲ್



ಎನ್ನುತ್ತಾರೆ.

ಪಾಯಿಂಟ್ ಕುಸ್ತಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಲು ಆರಂಭಿಸಿದಾಗ ಯೋಗೇಶ್ವರ್ ದತ್ ಮತ್ತು ಸುಶೀಲ್ ಕುಮಾರ್ ರವರನ್ನು ತೀರಾ ಹತ್ತಿರದಿಂದ ಗಮನಿಸಿ ಇವರ ಪಟ್ಟುಗಳಿಗೆ ಮನಸೋತು ಇವರನ್ನು ತಮ್ಮ ಕುಸ್ತಿಯ ರೋಲ್ ಮಾಡೆಲ್ ಗಳಾಗಿಮಾಡಿಕೊಂಡಿದ್ದಾರೆ.

2010 ರಲ್ಲಿ ಕ್ರೀಡಾಕೂಟದಡಿ ಸೈನ್ಯದಲ್ಲಿ ಸಿಪಾಯಿಯಾಗಿ ಹುದ್ದೆಗಳಿಸಿ ಒಂದು ವರ್ಷಗಳ ಕಾಲ ಸೈನ್ಯದ ತರಬೇತಿಯನ್ನು ಪಡೆದು ತದನಂತರ ಕರ್ನಾಟಕದ ಏಷ್ಯನ್ ಮೆಡಲಿಸ್ಟ್ ವಿನಾಯಕ ದಳವಿ



**ಡಾ.ಸುಧಾಕರ ಜಿ.ಲಕ್ಕವಳ್ಳಿ**
ಕ್ರೀಡಾ ಲೇಖಕರು
**ಮೊ: 8747969381**

ಬೆಳಗಾಂ ಇವರ ತರಬೇತಿಯಲ್ಲಿ ಕುಸ್ತಿ ಕಲಿಯಲು ಆರಂಭಿಸಿ ಸಾಕಷ್ಟು ಪದಕಗಳನ್ನು ಬೇಟೆಯಾಡಿ ಭಾರತ ಮಾತೆಯ ಮಡಿಲಿಗೆ ಅರ್ಪಿಸಿದ್ದಾರೆ.

### ಇವರ ಕ್ರೀಡಾ ಸಾಧನೆಗಳು

**ಅಂತಾರಾಷ್ಟ್ರೀಯ ಮಟ್ಟದಲ್ಲಿ:–**

2016–ಕಾಮನವೆಲ್ತ್ ಕ್ರೀಡಾಕೂಟ (ಸಿಂಗಾಪುರ್) ಬೆಳ್ಳಿಯ ಪದಕ, 2015 ವಿಶ್ವ ಕುಸ್ತಿ ಚಾಂಪಿಯನಶಿಪ್ (ಅಮೇರಿಕಾ) ಬಾಗವಹಿಸುವಿಕೆ, 2016–17 ವಿಶ್ವ ಕುಸ್ತಿಚಾಂಪಿಯನಶಿಪ್(ಹಂಗೇರಿ)ಬಾಗವಹಿಸುವಿಕೆ, 2016 ವರ್ಲ್ಡ್ ಪ್ರೆಸಿಡೆಂಟ್ ಕಪ್ (ಖಜಕಿಸ್ಥಾನ) ಮೂರನೇ ಸ್ಥಾನ, 2009 ಎಷಿಯನ್ ಚಾಂಪಿಯನಶಿಪ್ (ಫಿಲಿಪ್ಪೀನ್ಸ್) ಬಾಗವಸುವಿಕೆ

**ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿನ ಸಾಧನೆಯನ್ನು ಗಮನಿಸುವುದಾದರೆ:–**

2022 (ಗುಜರಾತ್) ನ್ಯಾಷನಲ್ ಗೇಮ್ಸ್ – ಬೆಳ್ಳಿಯ ಪದಕ, 2009(ಅಯೋಧ್ಯ) ಜೂನಿಯರ್ ನ್ಯಾಷನಲ್–ಚಿನ್ನದ ಪದಕ, ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ(ದೆಹಲಿ)ನ್ಯಾಷನಲ್ –ಕಂಚಿನ ಪದಕ, 2012(ಅಯೋಧ್ಯ) ಸೀನಿಯರ್ ನ್ಯಾಷನಲ್ – ಕಂಚಿನ ಪದಕ, 2013 (ಕಲ್ಕತ್ತಾ) ಸೀನಿಯರ್ ನ್ಯಾಷನಲ್– ಭಾಗವಸುವಿಕೆ, 2014 (ಅಯೋಧ್ಯ)ಸೀನಿಯರ್ ನ್ಯಾಷನಲ್–ಕಂಚಿನ ಪದಕ, 2015 (ದೆಹಲಿ)ಸೀನಿಯರ್ ನ್ಯಾಷನಲ್ –ಬೆಳ್ಳಿಯ ಪದಕ, 2016(ಅಯೋಧ್ಯ)ಸೀನಿಯರ್ ನ್ಯಾಷನಲ್ –ಬೆಳ್ಳಿಯ ಪದಕ, 2017(ರೂಥಕ್ಕ್) ಸೀನಿಯರ್ ನ್ಯಾಷನಲ್ –ಕಂಚಿನ ಪದಕ–2018 (ಅಯೋಧ್ಯ)ಸೀನಿಯರ್ ನ್ಯಾಷನಲ್ –ಕಂಚಿನ ಪದಕ, 2019 (ಪಂಜಾಬ್) ಸೀನಿಯರ್ ನ್ಯಾಷನಲ್ ಬಾಗವಸುವಿಕೆ, 2020(ಪಂಜಾಬ್) ಸೀನಿಯರ್ ನ್ಯಾಷನಲ್– ಬೆಳ್ಳಿಯ ಪದಕ, 2021 (ಅಯೋಧ್ಯ) ಸೀನಿಯರ್ ನ್ಯಾಷನಲ್–ಕಂಚಿನ ಪದಕ ಮತ್ತು 2022 (ರಾಂಚಿ) ಸೀನಿಯರ್ ನ್ಯಾಷನಲ್ ಫೇಡರೇಷನ್ ಕಪ್–ಬಂಗಾರದ ಪದಕ.

**ಸರ್ವಿಸಸ್ ಚಾಂಪಿಯನಶಿಪ್** ಗಳಲ್ಲಿ ಪಡೆದಿರುವ ಪದಕಗಳ ಪಟ್ಟಿಯನ್ನು ನೋಡುವುದಾದರೆ, 2012 (ಇಲಹಾಬಾದ್) ಮೂರನೇ ಸ್ಥಾನ, 2014 (ದೆಹಲಿ) ಬೆಳ್ಳಿಯ ಪದಕ, 2016(ಪುಣೆ)ಬಂಗಾರದ ಪದಕ,2017 (ದೆಹಲಿ) ಮೂರನೇ ಸ್ಥಾನ,2018 (ದೆಹಲಿ) ಬೆಳ್ಳಿಯ ಪದಕ, 2019 (ಪುಣೆ) ಬಂಗಾರದ ಪದಕ,2021 (ದೆಹಲಿ) ಬಂಗಾರದ ಪದಕ,2022 (ಪುಣೆ) ಬಂಗಾರದ ಪದಕ,

ಇವರ ಸಾಧನೆಯನ್ನು ಪರಿಗಣಿಸಿ ಸರ್ಕಾರ ಮತ್ತು ವಿವಿಧ ಸಂಘ ಸಂಸ್ಥೆಗಳು ಅನೇಕ ಪ್ರಶಸ್ತಿ ಮತ್ತು ಪುರಸ್ಕಾರಗಳನ್ನು ನೀಡಿ ಗೌರವಿಸಿವೆ.

**ಪ್ರಮುಖವಾಗಿ ಗೌರವ ಪ್ರಶಸ್ತಿಗಳು :–**

ಏಕಲವ್ಯ ಪ್ರಶಸ್ತಿ–2015, ಕರ್ನಾಟಕ ಒಲಂಪಿಕ್ ಪ್ರಶಸ್ತಿ–2011 ಮತ್ತು 2022 ಕರುನಾಡು ಸಂಪತ್ತು ಪ್ರಶಸ್ತಿ ಪ್ರಮುಖವಾಗಿವೆ.

ಭಾರತೀಯ ಶೈಲಿ ಕುಸ್ತಿಗಳಲ್ಲಿ ಕಿತ್ತೂರ ಕುಮಾರ, ಕರ್ನಾಟಕ ಕುಮಾರ ಮತ್ತು ಕರ್ನಾಟಕ ಕೇಸರಿ (ಹಿತ್ತಲ ಗ್ರಾಮ) ಎಂಬಿತ್ಯಾದಿ ಪ್ರಶಸ್ತಿಗಳನ್ನು ಪಡೆದು ಎರಡು ಬೆಳ್ಳಿ ಗದೆಗಳನ್ನು ಗೆದ್ದಿರುತ್ತಾರೆ.

ಕುಸ್ತಿ ಎಂಬುದು ಒಬ್ಬ ರೈತನ ಬದುಕಿದ್ದಂತೆ ರೈತ ತನ್ನ ಭೂಮಿಯಲ್ಲಿ ಎಷ್ಟು ಶ್ರಮ, ಶ್ರದ್ಧೆ ವಹಿಸಿ ದುಡಿಯುತ್ತಾನೋ ಅದಕ್ಕೆ ತಕ್ಕಂತೆ ಫಲ ಭೂತಾಯಿ ನೀಡುತ್ತಾಳೆ, ಅದೇ ರೀತಿ ಕುಸ್ತಿ ಅಖಾಡವು ಹೌದು ಎಂದು ಹೇಳುತ್ತಾ ಸರಿಯಾದ ವೈಜ್ಞಾನಿಕ ತರಬೇತಿ, ಜ್ಞಾನಭರಿತ ಕೌಶಲ್ಯಗಳ ಅಳವಡಿಕೆ, ಶ್ರಮ, ಶ್ರದ್ಧೆ ಸಮಯೋಚಿತ ಪ್ರದರ್ಶನ, ಆಹಾರ ಮತ್ತು ವಿಶ್ರಾಂತಿ ಸರಿಯಾದ ರೀತಿ ಅಳವಡಿಸಿಕೊಂಡು ಪ್ರಯೋಗಿಸಿದ್ದೆ ಆದರೆ ಯಶಸ್ಸು ಶತಸಿದ್ಧ ಎಂದು ಹೇಳುತ್ತಾ ಇವರೆವಿಗೂ ಗ್ರಿಕೋ ರೋಮನ್ ಶೈಲಿಯ ಸೀನಿಯರ್ ಪಂದ್ಯಾಟಗಳಲ್ಲಿ ಅತಿ ಹೆಚ್ಚಿನ ಸಾಧನೆಯನ್ನು ಕರ್ನಾಟಕದ ಕುಸ್ತಿಪಟುವಾಗಿ ನಿಮ್ಮೆಲ್ಲರ ಬೆಂಬಲದಿಂದ ಸಾಧ್ಯ ಮಾಡಿರುವುದು ನನಗೆ ಹೆಮ್ಮೆ ಎಂದು ಹೇಳುತ್ತಾರೆ ಕನ್ನಡಿಗ ರಫಿಕ್.

ಸರ್ಕಾರದಿಂದ ಕ್ರೀಡಾ ಶಾಲೆಗಳಿಗೆ ವೈಜ್ಞಾನಿಕ ಸವಲತ್ತು, ಅಕಾಡೆಮಿಗಳ ಸ್ಥಾಪನೆ,ತರಬೇತುದಾರರು, ಆಹಾರ ತಜ್ಞರ ನಿಯೋಜನೆ ಮತ್ತು ಆಯೋಜಕರ ಬೆಂಬಲ ದೊರೆತಾಗ ಉತ್ತಮ ಕುಸ್ತಿಪಟುಗಳನ್ನು ಸೃಷ್ಟಿಸಲು ಸಾಧ್ಯ,

ಕುಸ್ತಿ ಕ್ರೀಡಾಕೂಟಗಳನ್ನು ನಡೆಸಿ ಟೈಟಲ್ ಗಳನ್ನು ನೀಡುವಾಗ ಆಯೋಜಕರು ದಯಮಾಡಿ ಗಮನಹರಿಸಬೇಕು ನೀವು ನೀಡುವುದಾದರೆ ನಗದು, ಪಾರಿತೋಷಕ, ಗದೆ ಮುಂತಾದವುಗಳನ್ನು ನೀಡಿ ಗೌರವಿಸಿ ಆದರೆ ಪ್ರಸ್ತುತ ಇರುವ ಟೈಟಲ್ ಗಳನ್ನು ಪದೇಪದೇ ನೀಡುವುದರಿಂದ ಅವುಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತೇವೆ ಎಂಬ ಬೇಸರವನ್ನು ವ್ಯಕ್ತಪಡಿಸುತ್ತಾ, ಫ್ರೀ ಸ್ಟೈಲ್ ಮಾದರಿಯಲ್ಲಿಯೇ ಗ್ರಿಕೋ ರೋಮನ್ ಶೈಲಿಯ ಕುಸ್ತಿಗಳನ್ನು ಆಯೋಜಿಸಬೇಕು ಅದರೊಂದಿಗೆ ಮಹಿಳೆಯರಿಗೂ ಹೆಚ್ಚಿನ ಆದ್ಯತೆ ನೀಡಬೇಕೆಂದು ತಿಳಿಸುತ್ತಾರೆ.

ರಾಷ್ಟ್ರೀಯ ಕ್ರೀಡಾ ಕೂಟಗಳ ಆಯ್ಕೆಯ ಸಮಯ ಮತ್ತು ಮಾದರಿಯಲ್ಲಿ ಕೊಂಚ ಬದಲಾವಣೆ ಮಾಡಿಕೊಂಡು ಸರ್ವರಿಗೂ ಆದ್ಯತೆ ನೀಡುವ ನಿಟ್ಟಿನಲ್ಲಿ ಆಯ್ಕೆದಾರರು ಗಮನ ಹರಿಸಬೇಕು ಎಂದು ವಿನಂತಿಸುತ್ತಾರೆ ರಫಿಕ್.

ಒಲಂಪಿಕ್ ಪದಕ ಪಡೆಯುವ ಕನಸು ನನ್ನಿಂದ ಸಾಧ್ಯವಾಗಲಿಲ್ಲ ಮುಂಬರುವ ಕುಸ್ತಿಪಟುಗಳು ಇದನ್ನು ಸಾಧಿಸುವ ಅವಕಾಶ ಸಾಕಷ್ಟು ಇದ್ದು ಅಂತಹ ಪೈಲ್ವಾನರುಗಳನ್ನು ಮೊದಲೇ ಗುರುತಿಸಿ, ಮನೆ, ಸರ್ಕಾರ ಹಾಗೂ ಆಯೋಜಕರು ಬೆಂಬಲ ನೀಡಬೇಕು ಹಾಗೂ ಕುಸ್ತಿಪಟು ತಾನು ಇಷ್ಟೆಲ್ಲಾ ಸೌಕರ್ಯಗಳನ್ನು ಪಡೆದ ಮೇಲೆ ಸಾಧಿಸದಿಸಲೇ ಬೇಕೆಂಬುವ ಛಲ ಮತ್ತು ಕೆಚ್ಚು ಅವನಲ್ಲಿದ್ದು ಅದನ್ನು ಸಾಧಿಸಿ ತೋರಿಸಬೇಕೆಂಬ ಕಿವಿ ಮಾತನ್ನು ಹೇಳುತ್ತಾರೆ ರಫಿಕ್.

ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದೂ, ಕ್ರೈಸ್ತ, ಮುಸಲ್ಮಾನ ಪಾರಸಿಕ ಜೈನರುದ್ಯಾನ.... ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ.

ಭಾರತ ಮಾತೆಯ ಧ್ವಜವನ್ನು ಕರದಲಿ ಪಿಡಿದು ಪದಕಕ್ಕೆ ಕೊರಳೊಡ್ಡುವಾಗ ನನ್ನೆದೆಯಲಿ ಸದಾ ಕುವೆಂಪುರವರ ಈ ಸಾಲುಗಳು ಸಂಭ್ರಮಿಸುತ್ತವೆ ಎಂದು ಗರ್ವದಿಂದ ನುಡಿಯುತ್ತಾರೆ ಭಾರತೀಯ ಕುಸ್ತಿ ಪೈಲ್ವಾನ್ ರಫೀಕ್.




# ಎಸ್ಟಿ ಸೇರ್ಪಡೆಗೆ ಅಂಬಿಗ ಸಮುದಾಯ ಅರ್ಹ

## ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ | ಕೇಂದ್ರ ಸರ್ಕಾರಕ್ಕೆ ಸ್ಪಷ್ಟೀಕರಣ ನೀಡಲಾಗುವುದು | ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ

**◆ಹಂಪಿ ಟೈಮ್ಸ್ ಹಾವೇರಿ**

ಅಂಬಿಗ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಈಗಾಗಲೇ ಎರಡು ಬಾರಿ ರಾಜ್ಯ ಸರ್ಕಾರ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ.ಪರಿಶಿಷ್ಟ ವರ್ಗಕ್ಕೆ ಸೇರಲು ಸಮುದಾಯ ಸಂಪೂರ್ಣ ಅರ್ಹತೆ ಪಡೆದಿದ್ದು, ಕೇಂದ್ರ ಸರ್ಕಾರ ಈಗ ಪುನಃ ಕೇಳಿರುವ ಸ್ಪಷ್ಟೀಕರಣವನ್ನು ಕೂಡಲೇ ಮಾಹಿತಿ ತರಿಸಿ ಸ್ಪಷ್ಟೀಕರಣ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅವರು ಇಂದು ಶ್ರೀ ನಿಜ ಶರಣ ಅಂಬಿಗರ ಚೌಡಯ್ಯನವರ 6ನೇ ಶರಣ ಸಂಸ್ಕೃತಿ ಉತ್ಸವ ಹಾಗೂ ನಿಜಶರಣ ಅಂಬಿಗರ ಚೌಡಯ್ಯನವರ 904 ನೇ ಜಯಂತೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕ್ರಮ ವಹಿಸಬೇಕು ಎಂದರು. 96–97 ರಲ್ಲಿಯೇ ದಿವಂಗತ ಶಾಸಕ ನಾರಾಯಣ ರಾವ್ ಎಸ್.ಟಿ ಗೆ ಸೇರಿಸಲು ಪ್ರಯತ್ನಿಸಿದ್ದರು ಎಂದು



ಮರೆಯಬಾರದು ಎಂದರು.

ದೋಣಿ ನಡೆಸುವುದು ಹಾಗೂ ಮೀನು ಹಿಡಿಯುವ ಕಾಯಕ ಅಂಬಿಗರದ್ದು. ಕಾಯಕದಲ್ಲಿ ಮೇಲುಕೀಳು ಎಂಬುದಿಲ್ಲ. ಮನುಷ್ಯರ ನಡುವೆ ತಾರತಮ್ಯ ಇರಬಾರದು. ಕಾಯಕವನ್ನು ಆಧರಿಸಿ ಮೇಲು ಕೀಳು ಎಂದು ತಾರತಮ್ಯ ಮಾಡಿದ್ದರ ವಿರುದ್ಧ ಬಸವಾದಿ ಶರಣರು ಹೋರಾಟ ಮಾಡಿದರು ಎಂದರು.

ಸಮಸಮಾಜದ ಕನಸು ನನಸಾಗಲು ಆರ್ಥಿಕ, ಸಾಮಾಜಿಕ ಶಕ್ತಿ ಪ್ರತಿಯೊಬ್ಬರೂ ಬರಬೇಕು ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಸ್ಥಾಪನೆಯನ್ನು ಹಿಂದೆ ನಮ್ಮ ಅವಧಿಯಲ್ಲಿಯೇ ಮಾಡಲಾಯಿತು. ಆರ್ಥಿಕ ಶಕ್ತಿ ಇಲ್ಲದ ಸಮಾಜ ಮುಖ್ಯ ವಾಹಿನಿಗೆ ಬರಲು ಸಾಧ್ಯವಿಲ್ಲ. ಸಮಸಮಾಜದ ಕನಸು ನನಸಾಗಲು ಆರ್ಥಿಕ, ಸಾಮಾಜಿಕ ಶಕ್ತಿ ಪ್ರತಿಯೊಬ್ಬರೂ ಬರಬೇಕು. ಬಸವಾದಿ ಶರಣರು ಕಾಯಕ ಮತ್ತು ದಾಸೋಹ ಎಂಬ ಎರಡು ತತ್ವಗಳನ್ನು ನೀಡಿದ್ದಾರೆ. ಕಾಯಕ ಎಂದರೆ ಉತ್ಪಾದನೆ, ದಾಸೋಹ ಎಂದರೆ ವಿತರಣೆ. ಕಾಯಕದಲ್ಲಿ ಎಲ್ಲರೂ ತೊಡಗಿ ಉತ್ಪಾದನೆಯನ್ನು ಎಲ್ಲರೂ ಹಂಚಿಕೊಳ್ಳಬೇಕು ಎನ್ನುವುದು ಇದರ ಅರ್ಥ. ಇನ್ನೊಬ್ಬರ ಗಳಿಕೆಯನ್ನು ಕುಳಿತು ಅನುಭವಿಸಬಾರದು. ಜಾತಿ ವ್ಯವಸ್ಥೆ ಗೆ ಚಾಲನೆ ಇಲ್ಲದಿರುವುದು ಆರ್ಥಿಕ, ಸಾಮಾಜಿಕ ಚಟುವಟಿಕೆ ಇಲ್ಲದಿರುವುದರಿಂದ. ಇದಕ್ಕೆ ಚಾಲನೆ ನೀಡಬೇಕೆಂದು ಬಸವಾದಿ ಶರಣರು ಹೇಳಿದ್ದರು ಎಂದರು.

ನಮ್ಮ ಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದು. ಸಮಾಜದ ಅಸಮಾನತೆಯನ್ನು ಹೋಗಲಾಡಿಸಬೇಕು. ಪಟ್ಟಭದ್ರ ಹಿತಾಸಕ್ತಿಯ ವಿರುದ್ಧ ನಿಲ್ಲಬೇಕಾಗುತ್ತದೆ. ಬದಲಾವಣೆ ಬಯಸದ ಜನ ಆಗಲೂ ಇದ್ದರು, ಈಗಲೂ ಇದ್ದಾರೆ ಎಂದರು. ಮುಖ್ಯ ಮಂತ್ರಿಗಳು ಹಿಂದುಳಿದ ಸಮಾಜದೊಂದಿಗೆ ಸದಾ ಇರುವುದಾಗಿ ಭರವಸೆಯಿತ್ತರು.

**ಕವಿ ಮನಸು**

## ಏಕೀ ಮುನಿಸು?



ದೂರನು ತಂದರು ನಾರೀ ಮಣಿಗಳು
ಕೇಳುತ ಸುಮ್ಮನೆ ಹೇಗಿರಲಿ
ಅವರುಗಳೆದುರಲಿ ನಿನ್ನನು ಬೈದೆನು
ಮುನಿಸನು ಕಳೆಯುವ ನಿಟ್ಟಿನಲಿ

ನನ್ನಯ ಮುದ್ದಿನ ಕಂದನ ಜರೆವೆನೆ
ಅರಿಯೆಯ ಮಾತೆಯ ಮನಸನ್ನು
ಮುನಿಸನು ತೊರೆಯುತ ನಸುನಗು
ಹೊಮ್ಮಲಿ
ಈತರ ಕೋಪವು ಸಾಕಿನ್ನು

ಮಡಿಲಲಿ ಕೂರಿಸಿ ಮುದ್ದಿಸಿ ನಿನ್ನನು
ನೀಡುವೆ ಸುಮಧುರ ನವನೀತ
ಕೂತಿರು ಇಲ್ಲಿಯೆ ಅಲ್ಲಿಹ ಗುಮ್ಮನು
ಬರುವನು ಮಕ್ಕಳ ಹಿಡಿವಾತ

ಅಣ್ಣನ ಜೊತೆಯಲಿ ಆಡುತ ಬಳಲಿದೆ
ಎಲ್ಲಿಗೆ ಹೋದನು ಬಲರಾಮ
ಇಬ್ಬರು ಜೊತೆಯಲಿ ಬೆಣ್ಣೆಯ ಮೆಲ್ಲಿರಿ
ಸುಮ್ಮನೆ ಕುಳಿತಿರಿ ಆರಾಮ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

(ಕಥೆ)

# ಹೊಸಿಲು ದಾಟಿದ ಹೆಣ್ಣು

ಕಾಲೇಜೊಂದರಲ್ಲಿ ಅರೆಕಾಲಿಕ ಉಪನ್ಯಾಸಕಿಯಾಗಿರುವ ಲಲಿತ ನೇರ ಸ್ವಭಾವದ ಆದರೆ ಅಷ್ಟೇ ಮೃದು ಹೃದಯದ ಹೆಣ್ಣು ಮಗಳು. ತಾನಾಗಿಯೇ ಈಕೆಯನ್ನು ಬಯಸಿ ಮದುವೆಯಾದ ವ್ಯಕ್ತಿ ಆಕೆಯ ಸೋದರ ಮಾವ ಮಧುಸೂದನ. ಪ್ರೀತಿಸಿ ಮದುವೆಯಾದ ಪತಿ, ಸ್ವಂತ ಮನೆ, ಮಾಡಲು ಒಂದು ಉದ್ಯೋಗ. ಆಕೆಯ ಜೀವನ ಸ್ವರ್ಗಕ್ಕೆ ಕಿಚ್ಚು ಹಚ್ಚು ಎನ್ನುವಂತೆ ಇತ್ತು.

ಆದರೆ ವಿಧಿಯ ಆಟ ಬೇರೆಯೇ ಇತ್ತು. ಅವರಿಬ್ಬರ ಪ್ರೀತಿಯ ಫಲವಾಗಿ ಹುಟ್ಟಿದ ಗಂಡು ಮಗು ಒಂದು ವರ್ಷದವರೆಗೆ ದಷ್ಟಪುಷ್ಟವಾಗಿ ಚೆನ್ನಾಗಿಯೇ ಇತ್ತು. ಆದರೆ ಒಂದು ವರ್ಷದ ನಂತರವೂ ಕೂಡ ಮಗು ಅತ್ತಿತ್ತ ನೋಡದೆ, ಶಬ್ದ ಬಂದ ಕಡೆ ತಿರುಗದೆ ಇದ್ದಾಗ ಬಾಯಿಂದ ಆ ಎಂಬ ಶಬ್ದ ಬಿಟ್ಟು ಬೇರೇನು ಬರದೇ ಹೋದಾಗ ಮಗುವಿಗೆ ಕಿವಿ ಕೇಳಿಸುವುದಿಲ್ಲವೇನು ಎಂಬ ಅನುಮಾನ ಆಕೆಗೆ ಶುರುವಾಯಿತು. ಹಾಗೆಂದು ಮನೆಯಲ್ಲಿ ಎಲ್ಲರನ್ನೂ ಮಗುವಿನ ಈ ನಡವಳಿಕೆಯ ಕುರಿತು ಹೇಳಿದಾಗ ಕೆಲ ಮಕ್ಕಳಿಗೆ ಹೀಗೆಯೇ ತಡವಾಗುತ್ತದೆ ಎಂಬ ಸಿದ್ದ ಉತ್ತರಗಳನ್ನು ಪಡೆದಳಾಕೆ. ಗಂಡನು ಕೂಡ ಈ ಕುರಿತು ನಿರ್ಲಕ್ಷಿಸಿದಾಗ ಆಕೆಯು ಕೂಡ ಕೆಲ ದಿನಗಳ ಕಾಲ ಸುಮ್ಮನಿದ್ದಳು.

ಒಂದೆರಡು ತಿಂಗಳು ಕಳೆದ ನಂತರ ಕುಟುಂಬದ ಸ್ನೇಹಿತರೊಬ್ಬರು ತಮ್ಮ ಪುಟ್ಟ ಮಗುವಿನೊಂದಿಗೆ ಇವರ ಮನೆಗೆ ಬಂದರು. ತನ್ನ ಮಗುವಿನ ವಯಸ್ಸಿನ ಮಗು ಪುಟ್ಟ ಪುಟ್ಟ ಹೆಜ್ಜೆಗಳನ್ನು ಇಟ್ಟು ನಡೆದಾಡುವುದನ್ನು ಕೈ ಮಾಡಿ ವಸ್ತುಗಳನ್ನು ಎಳೆಯುವುದನ್ನು ಮಾತನಾಡಲು ಮತ್ತು ಗಮನ ಸೆಳೆಯಲು ಪ್ರಯತ್ನಿಸುವುದನ್ನು ಕಂಡು ಆಕೆಗೆ ಮಗುವಿನ ಕುರಿತ ತನ್ನ ಸಂದೇಹ ನಿಜವೆನಿಸಿತು.

ಅಂತೆಯೇ ಈ ಬಾರಿ ಹಠ ಮಾಡಿ ಗಂಡನೊಂದಿಗೆ ಕಿವಿ ಮೂಗು ಮತ್ತು ಗಂಟಲ ತಜ್ಞರ ಬಳಿ ಪರೀಕ್ಷೆಗಾಗಿ ಕರೆದೊಯ್ದಳು. ಮುದ್ದಾದ ಮಗು ತಾಯಿಯ ಸೊಂಟದಿಂದ ವೈದ್ಯರ ಪರೀಕ್ಷಾ ಟೇಬಲ್ ಗೆ ಸ್ಥಳಾಂತರಿಸಲ್ಪಟ್ಟಿತು. ಮೂಲ ಪರೀಕ್ಷೆ ಮುಗಿದ ನಂತರ ವೈದ್ಯರು ಇನ್ನೂ ಹಲವಾರು ಪರೀಕ್ಷೆಗಳನ್ನು ಮಾಡಿದ ನಂತರ ಪಾಲಕರನ್ನು ಕರೆದರು. ಕೊಂಚ ಆತಂಕದಿಂದ ವೈದ್ಯರ ಕೋಣೆ ಹೊಕ್ಕ ದಂಪತಿಗಳಿಗೆ ಮಗು ಸಾಮಾನ್ಯ ಮಕ್ಕಳಂತೆ ಇಲ್ಲ ಎಂಬುದನ್ನು ಮನಗಾಣಿಸಿದ ವೈದ್ಯರು ಮಗುವಿಗೆ ಸಂಪೂರ್ಣವಾಗಿ ಕಿವಿ ಕೇಳುವುದಿಲ್ಲ ಇದರಿಂದಾಗಿ ಮಾತನಾಡುವುದಕ್ಕೂ ತೊಂದರೆ ಆಗಬಹುದು ಎಂದು ಹೇಳಿದರು. ಹೆಚ್ಚಿನ ಪರೀಕ್ಷೆಗಾಗಿ ಮಗುವನ್ನು ನರರೋಗ ತಜ್ಞರ ಬಳಿ ಕರೆದೊಯ್ಯಲು ಸಲಹೆ ನೀಡಿದರು.

ಅಂತೆಯೇ ಮಗುವನ್ನು ಹೊತ್ತು ದಂಪತಿಗಳು ನರರೋಗ ತಜ್ಞರನ್ನು ಭೇಟಿಯಾದರು. ಅಲ್ಲಿಯೂ ಕೂಡ ಅವರಿಗೆ ನಿರಾಶೆಯೇ ಕಾದಿತ್ತು. ಅವರ ಮಗು ಹಲವಾರು ಸಮಸ್ಯೆಗಳನ್ನು ಹೊಂದಿರುವ, ಯಾವುದೇ ವೈದ್ಯಕೀಯ ಪರಿಹಾರಕ್ಕೂ ಜಗ್ಗದ ತೊಂದರೆಗಳನ್ನು ಹೊಂದಿದೆ ಎಂಬ ವೈದ್ಯರ ನುಡಿ ದಂಪತಿಗಳ ಭರವಸೆಯನ್ನು ಮಣ್ಣುಗೂಡಿಸಿತು. ಆದರೆ ಅದರ ಜೊತೆಗೆ ವೈದ್ಯರು ಹೆಚ್ಚಿನ ಕಾಳಜಿ ವಹಿಸಿ ಲಾಲನೆ ಪಾಲನೆ ಮಾಡಿದರೆ ಮಗು ತನ್ನ ಮಟ್ಟಿಗೆ ತಾನು ತನ್ನ ಕೆಲಸ ಮಾಡಿಕೊಂಡು ಹೋಗುವಷ್ಟು ಸುಧಾರಿಸಬಹುದು ಮತ್ತು ಕಿವಿ ಕೇಳಿಸದ ಮಕ್ಕಳಿಗೆ ಇರುವ ಸ್ಪೀಚ್ ಥೆರಪಿ ಕೊಡುವ ಮೂಲಕ ಮಗುವಿಗೆ ಮಾತು ಬರುವಂತೆ ಮಾಡಬಹುದು ಎಂದು ಹೇಳಿದರು. ಕೊಂಚ ಸಮಾಧಾನಗೊಂಡ ಲಲಿತ ಗಂಡನೊಂದಿಗೆ ಹೊರಗೆ ಬಂದಳು. ಗಂಡನ ಮುಖದ ಗಂಟುಗಳು ಸಡಿಲಗೊಳ್ಳದೆ ಇರುವುದನ್ನು ಕಂಡು ಕೊಂಚ ಆತಂಕವಾದರೂ ಈಗ ತಾನೇ ಆಘಾತಕಾರಿ ವಿಷಯವನ್ನು ಕೇಳಿರುವುದರಿಂದ ಮನಸ್ಸಿಗೆ ಬೇಸರವಾಗಿರಬಹುದು ಎಂದು ತನ್ನನ್ನು ತಾನೇ ಸಮಾಧಾನಿಸಿಕೊಂಡಳು.



ವೀಣಾ ಹೇಮಂತಗೌಡ ಪಾಟೀಲ್,
ಮುಂಡರಗಿ, ಗದಗ

ಮುಂದಿನ ಎರಡೇ ದಿನಗಳಲ್ಲಿ ಮಧುಸೂದನ ಆಕೆಗೆ ಮಗುವನ್ನು ಯಾವುದಾದರೂ ಅನಾಥಾಶ್ರಮಕ್ಕೆ ಬಿಟ್ಟು ಬರೋಣ. ಯಾವುದೇ ರೀತಿಯ ಚಿಕಿತ್ಸೆ ಪ್ರಯೋಜನಕಾರಿಯಾಗುವುದಿಲ್ಲ ಎಂದು ತಣ್ಣಗೆ ಹೇಳಿದಾಗ ಕುಳಿತಲ್ಲಿಯೇ ಕುಸಿದು ಹೋದಳು ಲಲಿತ. ಒಂದೆರಡು ದಿನಗಳ ಕಾಲ ಯೋಚಿಸಿದಳು ಆಕೆ. ಆತನ ಹುಟ್ಟಿಗೆ ಕಾರಣರಾದ ತಾವೇ ಆತನನ್ನು ಅನಾಥಾಶ್ರಮಕ್ಕೆ ಬಿಡುವುದು ಆಕೆಗೆ ಸಮ್ಮತವಿರಲಿಲ್ಲ. ಗಂಡನೊಂದಿಗೆ ಈ ಕುರಿತು ಮಾತನಾಡಲು ಮಧುಸೂದನ ಆಕೆಯ ಮಾತುಗಳಿಗೆ ಅವಕಾಶವನ್ನು ನೀಡಲಿಲ್ಲ. ನಿನಗೆ ನಾನು ಬೇಕೋ ಮಗು ಬೇಕೋ ಯೋಚಿಸು.... ನಿನಗೆ ನಾನು ಬೇಕೆಂದರೆ ಮಗುವನ್ನು ಅನಾಥಾಶ್ರಮಕ್ಕೆ ಬಿಡಲು ಒಪ್ಪಿಕೋ. ಮಗುವೆ ಬೇಕೆಂದರೆ ನಿನಗೆ ನನ್ನ ಮನೆಯಲ್ಲಿ ಸ್ಥಳವಿಲ್ಲ ಎಂದು ತನ್ನ ಕೊನೆಯ ನಿರ್ಧಾರವನ್ನು ತಿಳಿಸಿ ಮನೆಯಿಂದ ಹೊರಗೆ ನಡೆದನು.

ಕಾಲ ಕೆಳಗಿನ ನೆಲವೇ ಕುಸಿದಂತ ಅನುಭವವಾಗಿ ಅಲ್ಲಿಯೇ ಇದ್ದ ಕುರ್ಚಿ ಒಂದರಲ್ಲಿ ಕುಳಿತುಕೊಂಡ ಲಲಿತ ಸಾಕಷ್ಟು ಹೊತ್ತು ಅಳುತ್ತಲೇ ಇದ್ದಳು. ಕೊನೆಗೊಮ್ಮೆ ತನ್ನ ಕಣ್ಣೀರು ಒರೆಸಿಕೊಂಡ ಆಕೆ ನಿಧಾನವಾಗಿ ಮಗುವಿನ ಮತ್ತು ತನ್ನ ಬಟ್ಟೆ ಬರೆಗಳನ್ನು ಬ್ಯಾಗಿಗೆ ತುಂಬಿದಳು. ತನ್ನೆಲ್ಲ ಸರ್ಟಿಫಿಕೇಟ್ಗಳನ್ನು ಜೋಡಿಸಿಕೊಂಡಳು. ಒಂದು ಪುಟ್ಟ ಕಾಗದದಲ್ಲಿ ಗಂಡನಿಗೆ... ನಿಮಗೆ ಇನ್ನೊಬ್ಬ ಹೆಂಡತಿ ಸಿಗಬಹುದು ಆದರೆ ನನ್ನ ಮಗನಿಗೆ ನಾನು.... ಅವನ ತಾಯಿ ಬೇಕೇ ಬೇಕು ಎಂದು ಬರೆದು ಕಣ್ಣಿಗೆ ಕಾಣುವಂತೆ ಟೇಬಲ್ಲಿನ ಮೇಲಿಟ್ಟು... ಒಂದು ಕೈಯಲ್ಲಿ ಮಗುವನ್ನು ಮತ್ತೊಂದು ಕೈಯಲ್ಲಿ ತನ್ನ ಬ್ಯಾಗನ್ನು ಹಿಡಿದುಕೊಂಡು ಮನೆಯ ಹೊಸಿಲು ದಾಟಿದಳು.






# ಸಾಮೂಹಿಕ ಅತ್ಯಾಚಾರ ಪ್ರಕರಣ ಮುಚ್ಚಿಹಾಕುವ ಪ್ರಶ್ನೆಯೇ ಇಲ್ಲ

## ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ । ಆರೋಪಿಗಳನ್ನು ಬಂಧಿಸಿದ್ದು ತನಿಖೆ ನಡೆಯುತ್ತಿದೆ । ಅನಂತಕುಮಾರ ಹೆಗಡೆ ಈಗ ಪ್ರತ್ಯಕ್ಷ

**ಹಂಪಿ ಟೈಮ್ಸ್ ಹಾವೇರಿ:**
ಕಾನೂನನ್ನು ಯಾರೇ ಕೈಗೆ ತೆಗೆದುಕೊಂಡರೆ ಶಿಕ್ಷೆ ಕೊಡಿಸುವ ಪ್ರಯತ್ನ ಮಾಡುತ್ತೇವೆ. ಯಾರನ್ನೂ ರಕ್ಷಿಸುವ ಪ್ರಯತ್ನ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರು ಇಂದು ಹಾವೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಸಾಮೂಹಿಕ ಅತ್ಯಾಚಾರ ಪ್ರಕರಣ: ಅರ್ಜಿ ಪರಿಗಣಿಸಲಾಗುವುದು ಘಟನೆ ನಡೆದು ಒಂದು ತಿಂಗಳು ಆದರೂ ಸರ್ಕಾರದ ಪರವಾಗಿ ಯಾರೂ ಸಾಂತ್ವನ ಹೇಳಿಲ್ಲ ಏನೆಂಬ ಪ್ರಶ್ನೆಗೆ ಉತ್ತರಿಸಿ ಈಗ ತಾನೇ ಅರ್ಜಿ ಕೊಟ್ಟಿದ್ದಾರೆ ಅದನ್ನು ಪರಿಗಣಿಸಲಾಗುವುದು ಎಂದರು.

ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿದ್ದು ತನಿಖೆ ನಡೆಯುತ್ತಿದೆ. ನಮ್ಮ ಸರ್ಕಾರದಲ್ಲಿ ಯಾರನ್ನೂ ಕಾನೂನು ಕೈಗೆತೆಗೆದುಕೊಳ್ಳಲು ಬಿಡುವುದಿಲ್ಲ. ಕಾನೂನಿನ ಪ್ರಕಾರ ಕ್ರಮ ಜರುಗಿಸುವ ಕೆಲಸ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಉಳಿದಂತೆ ನೈತಿಕ ಪೊಲೀಸ್ ಗಿರಿ ಬಗ್ಗೆ ಮಾತನಾಡುತ್ತಾರೆ ಅತ್ಯಾಚಾರ ಪ್ರಕರಣದ ಬಗ್ಗೆ ಮಾತನಾಡಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯೆ ನೀಡಿ ಮಾತನಾಡಿದರೆ ಮಾತ್ರ ಕ್ರಮ ಇಲ್ಲದಿದ್ದರೆ ಇಲ್ಲವೇ ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು ಮಾತನಾಡದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲವೇ ಎಂದರು.

ಪ್ರಾಥಮಿಕ ವರದಿ ಬಂದ ನಂತರ ತೀರ್ಮಾನ ಪ್ರಕರಣವನ್ನು ಎಸ್.ಐ.ಟಿಗೆ ವಹಿಸಲು ಬಿಜೆಪಿ ಆಗ್ರಹ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಎಸ್.ಐ.ಟಿ ನಲ್ಲಿರುವವವರೂ ಪೊಲೀಸರೇ ಎಂದರು. ಪ್ರಕರಣದ ತನಿಖೆ ನಡೆಯುತ್ತಿದ್ದು, ಪ್ರಾಥಮಿಕ ವರದಿ ಬಂದ ನಂತರ ತೀರ್ಮಾನಿಸಲಾಗುವುದು ಎಂದರು.

ಪ್ರಕರಣ ಮುಚ್ಚಿಹಾಕುವ ಪ್ರಯತ್ನ ನಡೆದಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ ಪ್ರಕರಣ ಮುಚ್ಚಿಹಾಕವ ಪ್ರಶ್ನೆಯೇ ಇಲ್ಲ ಎಂದರು. ತಪ್ಪು ಮಾಡಿದವರ ಮೇಲೆ ಕ್ರಮ ವಹಿಸಲಾಗುವುದು. ಅರ್ಜಿಯನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಬೆಳಗಾವಿ ಜಿಲ್ಲೆಯ ಪ್ರಕರಣದಲ್ಲಿ ಮಾತ್ರ ತಕ್ಷಣ ಭೇಟಿ ನೀಡಿ ಪರಿಹಾರ ನೀಡಿದಿರಿ ಎಂಬ ಪ್ರಶ್ನೆಗೆ ಅಲ್ಲಿಗೆ ಗೃಹ ಸಚಿವರು ಭೇಟಿ ನೀಡಿದ್ದರು. ಭೇಟಿ ನೀಡುವಂತೆ ನಾನೇ ಸೂಚನೆ ನೀಡಿದ್ದೆ. ಇಲ್ಲಿ ಗೃಹ ಸಚಿವರು ಇರಲಿಲ್ಲ. ಕೇಂದ್ರದ ಮಾಜಿ ಸಚಿವ ಶಿವಣ್ಣ ಭೇಟಿ ನೀಡಿದ್ದಾರೆ ಎಂದರು.

ಸಂತ್ರಸ್ತೆ ಯನ್ನು ಭೇಟಿ ಮಾಡಿ ಬರುವುದು ಸಾಂತ್ವನ ಹೇಳುವುದು ಒಂದು ಭಾಗವಾದರೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳುವುದು ಮತ್ತೊಂದು ಭಾಗ ಎಂದರು. ಸರಿಪಡಿಸುವ ಕ್ರಮಕೈಗೊಳ್ಳಲಾಗುವುದು ಸಂತ್ರಸ್ತೆಗೆ ಚಿಕಿತ್ಸೆ ನೀಡದೇ ಆರೋಪಿಗೆ ಪೊಲೀಸರು ಚಿಕಿತ್ಸೆ ನೀಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಈ ಬಗ್ಗೆ ಶಿವಣ್ಣ ಅವರೊಂದಿಗೆ ಮಾತನಾಡಿ ಸರಿಪಡಿಸುವ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು ಎಂದರು.

ಫೆಬ್ರವರಿ ತಿಂಗಳಲ್ಲಿಯೇ ಬಜೆಟ್ ಮಂಡನೆ ಮಾರ್ಚ್ ಮೊದಲ ವಾರದೊಳಗೆ ಚುನಾವಣಾ ನೀತಿ ಸಂಹಿತೆ ಘೋಷಣೆಯಾಗುವುದರಿಂದ ಫೆಬ್ರವರಿ ತಿಂಗಳಲ್ಲಿಯೇ ಬಜೆಟ್ ಮಂಡಿಸಲಾಗುವುದು ಎಂದರು.

ಕೇಂದ್ರ ಸರ್ಕಾರದಿಂದ ಪರಿಹಾರ ಬಂದ ನಂತರ ರೈತರಿಗೆ ಪುನಃ ಪರಿಹಾರ ರೈತರರಿಗೆ ಪರಿಹಾರ ನೀಡಿಲ್ಲವೆಂದು ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ರೈತರಿಗೆ 2000 ರೂ.ಗಳ ತಾತ್ಕಾಲಿಕ ಪರಿಹಾರವನ್ನು ನೀಡುತ್ತಿದ್ದು ಕೇಂದ್ರ ಸರ್ಕಾರದಿಂದ ಪರಿಹಾರ ಬಂದ ನಂತರ ಪುನಃ ಎನ್.ಡಿ.ಆರ್.ಎಫ್ ನಿಯಮಾವಳಿ ಗಳ ಪ್ರಕಾರ ಪರಿಹಾರ ನೀಡಲಾಗುವುದು ಎಂದರು.

ಮನುಷ್ಯತ್ವ ಇರಬೇಕು ಅನಂತಕುಮಾರ್ ಹೆಗಡೆಯವರು ಏಕವಚನದಲ್ಲಿ ಮಾತನಾಡುವುದನ್ನು ಕಲಿಸಿದ್ದೇ ಸಿದ್ದರಾಮಯ್ಯ ಅವರು ಎಂದು ಸಮರ್ಥಿಸಿಕೊಂಡಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯೆ ನೀಡಿ ಅವರು ರಾಜಕೀಯವಾಗಿ ಆರೋಪ ಮಾಡುತ್ತಾರೆ. ಅನಂತ ಕುಮಾರ್ ಹೆಗಡೆ ಅವರು ಇವತ್ತಿನವರೆಗೆ ನಾಪತ್ತೆಯಾಗಿದ್ದರು. ಚುನಾವಣೆ ಹತ್ತಿರ ಬಂದಂತೆ ಕಾಣಿಸಿಕೊಂಡು ಹೇಳಿಕೆ ನೀಡಿದ್ದಾರೆ. ಸಂಸದರಾಗಿ ಮಾಜಿ ಮಂತ್ರಿಯಾಗಿ ಕ್ಷೇತ್ರ ಕ್ಕೆ ಏನಾದರೂ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು ಇಂದಿನವರೆಗೆ ಬಡವರ ಸಮಸ್ಯೆ ಕೇಳಿದ್ದಾರೆಯೇ? ಸಂಸ್ಕೃತಿ ಎಂದರೆ ಮನುಷ್ಯತ್ವ. ಮೊದಲು ಮನುಷ್ಯತ್ವ ಇರಬೇಕು ಎಂದರು.



## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 15-01-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.94 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.167 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1621.11 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9942 ಕ್ಯುಸೆಕ್ |
| ಸಾಮರ್ಥ್ಯ | 64.492 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.1332 /2023**

Between:
1.G.Marakka D/o of Late G.H. Marappa Late Rajappa, aged about 70 years, 2.Jayamma Wife of Doddasiddappa aged about 66 years, 3.Kuri Marappa, S/o late G.H Marappa, aged about 65 years, 4. Sanna Doddappa Son of late G.H Marappa aged about 60yers 5. Dodamma wife of Late Ajjappa aged about 58 years, 6. Hiriyamma wife of late Rajappa aged about 56 yers, 7. G. Doddappa son of late G.Marappa aged about 40yers, 8. Marappa son of late G.marapap aged about 38yers, 9. Halappa son of late G.Marappa aged about 34yers
All are Hindu, Agriculturist, residing at Suladahalli Village Kudligi Taluk Vijayanagara Dist
... Petitioner And
1. The Tahasildar Kudligi
2. Doddappa S/O G.H Marappa
...Respondent Suladahalli

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner Great grandmother by name Gollara Dodda Balamma W/o Gollara Dodda @ Ramappa was died on 19/11/1980 Suladahalli Village in Kudligi Taluk, Vijayanagra District. on the file of the civil Judge& JMFC at Kudligi, the The Tahasildar Kudligi is the respondent. The interested per Great grandmother s are hereby summoned to appear in this court in per Great grandmother or by pleader duly instructed and able to answer all material question relating to the above petition on 18/01/2024 at 11 A.M. and interested per Great grandmother sare directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 04/12/2023

By Order of the court
Chief Ministerial officer
Civil Judge and J.D) Court, Kudligi

N.Narappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.933 /2023**

Between:
1. Shekarappa son of Tayammanavara Thipayya, aged about 59 years Hindu, Agriculturist, residing at Hirekubalgunte Village Kudligi Taluk Vijayanagara Dist
... Petitioner
And
1. The Tahasildar Kudligi ... Respondent

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioners Father by name Eramma wife of Tayammanavara Thipayya was died on 01/06/1988 Hirekubalgunte Village Kudligi Taluk Vijayanagara Dist. on the file of the civil Judge& JMFC at Kudligi, the The Tahasildar Kudligi is the respondent. The interested per Great s are hereby summoned to appear in this court in per or by pleader duly instructed and able to answer all material question relating to the above petition on 25/01/2024 at 11 A.M. and interested per sare directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 15/12/2023

By Order of the court
Chief Ministerial officer
Civil Judge and J.D) Court, Kudligi

G.M Malikarjuna
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.934 /2023**

Between:
1. Shekarappa son of Tayammanavara Thipayya, aged about 59 years Hindu, Agriculturist, residing at Hirekubalgunte Village Kudligi Taluk Vijayanagara Dist
...Petitioner And
1. The Tahasildar Kudligi ...Respondent

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioners Father by name Tayammanavara Thipayya son of Sanna Basappa was died on 5/07/1985 Hirekubalgunte Village Kudligi Taluk Vijayanagara Dist. on the file of the civil Judge& JMFC at Kudligi, the The Tahasildar Kudligi is the respondent. The interested per Great s are hereby summoned to appear in this court in per or by pleader duly instructed and able to answer all material question relating to the above petition on 25/01/2024 at 11 A.M. and interested per sare directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 15/12/2023

By Order of the court
Chief Ministerial officer
Civil Judge and J.D) Court, Kudligi

G.M Malikarjuna
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.1028 /2023**

Between:
1. B.Venkamma wife of late V.Basavaraja aged about 39 years Hindu, Agriculturist, residing at Siddapura Vaddarahatti Village Kudligi Taluk Vijayanagara Dist ...
Petitioner And
1. The chief officer Town Panchayathi Kottur .....Respondent

**SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioners husband by name Basavaraja son of Late Hulugappa was died on 11/06/2009 Siddapura Village Kudligi Taluk Vijayanagara Dist. on the file of the civil Judge& JMFC at Kudligi, the The Tahasildar Kudligi is the respondent. The interested per Great s are hereby summoned to appear in this court in per or by pleader duly instructed and able to answer all material question relating to the above petition on 30/01/2024 at 11 A.M. and interested per sare directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 12/01/2024

By Order of the court
Chief Ministerial officer
Civil Judge and J.D) Court, Kudligi

N.Narappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.1453 /2023**

Between:
1.G.Marakka D/O Late G.H marappa late Rajappa .aged about 70 yers 2.Jayamma wife of Doddasiddappa aged about 66 years 3.Kuri Marappa son of late G.H marappa aged about 65 years 4. Sannadoddappa son of Late G.H marappa aged about 58 years 5. Parusappa son of late Hanumanthappa aged about 65 years
All are Hindu, Agriculturist, residing at Suladahalli Village Kudligi Taluk Vijayanagara Dist ...
Petitioner And
1.The Tahasildar Kudligi ....Respondent
G.Doddappa S/O G.H marappa
Suladahalli

SUMMONS TO INTERESTED PERGRAND FATHER U/O V RULE 20(A) R/W SEC 151 OF CPC FILED ON BEHALF OF THE PETITIONER.

Whereas the above petitioner has instituted above petition to get the death certificate of his deceased Petitioner Father by Name G.Sanna Kodadappa son of late Patreppa was died on 08/02/1971 at Eachalabommanahalli village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 27/12/2023 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 18/10/2023.

By Order of the court
Chief Ministerial officer
Civil Judge and J.D) Court, Kudligi

N.Narappa
Advocate, Kudligi

PLACE YOUR ADVERTISEMENT HERE, CONTCAT FOR MORE DETAILS: 9448633038





ಮೈಕ್ರೋ ನ್ಯೂಸ್

## ಜಾಗೃತಿಗಾಗಿ ಜಾತ್ರ ಮಹೋತ್ಸವ

ಮೊದಲ ಪುಟದಿಂದ


ನಗರದ ಹೊರವಲಯದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆವರಣದಲ್ಲಿ ಸರಳವಾಗಿ ನಡೆದ ಮಹಾಯೋಗಿನಿ ಅಕ್ಕಮಹಾದೇವಿ ವಚನಗಳ ಪಲ್ಲಕ್ಕಿ ಮಹೋತ್ಸವ ಮತ್ತು ಆರನೆಯ ವರ್ಷದ ಪೀಠಾರೋಹಣ ಸಮಾರಂಭದ ದಿವ್ಯಸಾನಿಧ್ಯವನ್ನು ವಹಿಸಿ ಅವರು ಮಾತನಾಡಿದರು. ರಾಜ್ಯದ ವೀರಶೈವ ಲಿಂಗಾಯತ ಸಮಾಜದಲ್ಲಿ, ಪಂಚಮಸಾಲಿ ಸಮಾಜದ ಜನರು ಅಧಿಕ ಸಂಖ್ಯೆಯ ಇರುವುದರಿಂದ ಅವರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ರಾಜಕೀಯವಾಗಿ ಸಮಾಜದಲ್ಲಿ ಮುಖ್ಯವಾಹಿನಿಗೆ ತರುವ ದೃಷ್ಟಿಯಿಂದ ಪ್ರತಿವರ್ಷ ಹರ ಜಾತ್ರಾ ಮಹೋತ್ಸವ ಆಚರಣೆ ಮಾಡಿ, ಜಾತ್ರಾ ಸಮಯದಲ್ಲಿ ಸಮಾಜದ ಎಲ್ಲರನ್ನೂ ಒಗ್ಗೂಡಿಸಿ ಸಮಾಜಕ್ಕೆ ಶಕ್ತಿಯನ್ನು ತುಂಬುವ ಕಾರ್ಯವನ್ನು ಮಾಡಲಾಗುತ್ತದೆ ಹೊರತು ಸಮಾಜವನ್ನು ಒಡೆಯುವಂತ ಕಾರ್ಯವನ್ನು ಮಾಡುತ್ತಿಲ್ಲ ಎಂದು ಹೇಳಿದರು. ಪಂಚಮಸಾಲಿ ಸಮಾಜದಲ್ಲಿ ಬಹುತೇಕ ಜನರು ಕೃಷಿಯನ್ನು ಹೆಚ್ಚು ಅವಲಂಬಿಸಿ ಜೀವನ ಮಾಡುವುದರಿಂದ ಈ ಬಾರಿ ಮಳೆ ಬರದೆ ರೈತರು ಸಂಕಷ್ಟದ ಜೀವನ ಮಾಡುವಂತ ಸಂದರ್ಭದಲ್ಲಿ ಅದ್ದೂರಿಯಾಗಿ ಹರ ಜಾತ್ರಾ ಮಹೋತ್ಸವ ಆಚರಣೆ ಮಾಡದೆ ಸರಳವಾಗಿ ಆಚರಣೆ ಮಾಡಲಾಗಿದೆ ಎಂದು ಹೇಳಿದರು. ರಾಜ್ಯದ ಸಕಲ ವೀರಶೈವ ಲಿಂಗಾಯತ ಸಮಾಜಕ್ಕೆ ಒಂದೇ ರೀತಿಯ ಮೀಸಲಾತಿ ಇರಬೇಕೆಂದು ನಮ್ಮ ಅಭಿಪ್ರಾಯವಾಗಿದ್ದು, ನಾವು ಈಗಾಗಲೇ ಎಲ್ಲಾ ಲಿಂಗಾಯತರನ್ನು ಕೇಂದ್ರದ ಒಬಿಸಿ ಮೀಸಲಾತಿ ಪಟ್ಟಿಗೆ ಸೇರ್ಪಡೆ ಮಾಡಬೇಕೆಂದು ಅನೇಕ ರೀತಿಯ ಹೋರಾಟ ಮಾಡಲಾಗಿದ್ದು ಜೊತೆಗೆ ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ನೀಡುವಂತೆ ಕೇಳಿದಾಗ ಹಿಂದಿನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಯವರು ನಮಗೆ 2 ಸಿ ಮತ್ತು 2ಡಿ ಮೀಸಲಾತಿ ಘೋಷಿಸಿದ ವೇಳೆಯಲ್ಲಿ ನಾವು ಅದನ್ನು ಸ್ವಾಗತ ಮಾಡಲಿಲ್ಲ ಮತ್ತು ವಿರೋಧ ಕೂಡ ಮಾಡಲಿಲ್ಲ. ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ಪಡೆಯವ ನಿಟ್ಟಿನಲ್ಲಿ ಈಗಲೂ ಕೂಡ ಕಾನೂನು ಹೋರಾಟ ನಡೆಸುತ್ತಿದ್ದು, ಸುಮಾರು 900 ಪುಟಗಳಷ್ಟು ದಾಖಲೆಗಳನ್ನು ಸರ್ಕಾರಕ್ಕೆ ನೀಡಿದ್ದು, ಆ ದೃಷ್ಟಿಯಿಂದ ನಮಗೆ ನ್ಯಾಯಲಯದಲ್ಲಿ ನ್ಯಾಯ ದೊರೆಯುತ್ತದೆ ಎಂಬ ವಿಶ್ವಾಸ ಹೊಂದಿರುವುದಾಗಿ ಹೇಳಿದರು. ಇದೇ ಜನವರಿ 22 ರಂದು ಅಯೋಧ್ಯೆಯಲ್ಲಿ ರಾಮಲಲ್ಲಾನ ಪ್ರಾಣಪ್ರತಿಷ್ಠಾಪನೆ ಹಾಗೂ ಶ್ರೀರಾಮ ಮಂದಿರದ ಉದ್ಘಾಟನೆಯ ಸಮಯದಲ್ಲಿ ಪ್ರತಿಯೊಂದು ಮನೆಯಲ್ಲಿ ದೀಪವನ್ನು ಹಚ್ಚಿ ಆ ದಿನದಂದು ರಾಮನವಮಿ ಆಚರಣೆ ಎಂದು ಭಾವಿಸಿಕೊಂಡು ತಿಳಿದು ಪೂಜೆ ಮಾಡಿ ರಾಮನನ್ನು ಆರಾಧಿಸಬೇಕು ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪನವರು ಮಾತನಾಡಿ ರಾಜ್ಯ ಸರ್ಕಾರ ಯಾವುದೇ ರೀತಿಯ ರಾಜಕೀಯ ಮಾಡದೆ ಎಲ್ಲಾ ವೀರಶೈವ ಲಿಂಗಾಯತರನ್ನು ಕೇಂದ್ರದ ಒಬಿಸಿ ಮೀಸಲಾತಿ ಪಟ್ಟಿಗೆ ಸೇರ್ಪಡೆ ಮಾಡುವುದಕ್ಕೆ ಮುಂದಾಗಬೇಕಿದೆ ಎಂದು ಹೇಳಿದರು.

ಈ ವೇಳೆ ವಿವಿಧ ಅಲಗೂರು ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ಮಹಾದೇವ ಶಿವಾಚಾರ್ಯ ಮಹಾಸ್ವಾಮಿಗಳು, ಮೈಸೂರಿನ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಹಾಗೂ ಹದಿನೈದಕ್ಕೂ ಹೆಚ್ಚಿನ ವಿವಿಧ ಮಠಗಳ ಸ್ವಾಮೀಜಿಯವರು ಮಾತನಾಡಿದರು.

# ಸರ್ವ ಸಮಾಜ ಸುಧಾರಣೆ ಎಲ್ಲರ ಆದ್ಯತೆಯಾಗಲಿ

### ಉಪ ತಹಸೀಲ್ದಾರ್ ಕೆ.ಚಂದ್ರಶೇಖರ ಹೇಳಿಕೆ | ಶ್ರೀಸಿದ್ಧರಾಮೇಶ್ವರ ಜಯಂತಿ



■ ಹಂಪಿ ಟೈಮ್ಸ್ ಕೂಡ್ಲಿಗಿ

ಜಾತೀಯತೆಯಿಂದ ಕೂಡಿದ ಸಮಾಜವನ್ನು ಸಿದ್ದರಾಮೇಶ್ವರರು ತಮ್ಮ ವಚನಗಳ ಮೂಲಕ ಪರಿರ್ತನೆಗೊಳಿಸಿದ್ದಾರೆ ಎಂದು ಉಪ ತಹಸೀಲ್ದಾರ್ ಕೆ.ಚಂದ್ರಶೇಖರ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಸೋಮವಾರ ತಾಲೂಕು ಆಡಳಿತ ಹಾಗೂ ತಾಲೂಕು ಭೋವಿ ಸಮಾಜದ ವತಿಯಿಂದ ಏರ್ಪಡಿಸಿದ್ದ ಶ್ರೀ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ಶ್ರೀ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಮಾತನಾಡಿದರು. ಸಮಾಜ ಸುಧಾರಣೆಗೆ ಮೊದಲ ಆದ್ಯತೆ ನೀಡಬೇಕು ಎಂದು ಜಗತ್ತಿಗೆ ಸಾರಿದ ಮಹಾನ್ ಶಿವಯೋಗಿ ಸಿದ್ದರಾಮೇಶ್ವರರ ಸಂದೇಶ ಸಾರ್ವಕಾಲಿಕವಾಗಿದೆ. ಇಂತಹ ಮಹಾನ್ ಕಾಯಕಯೋಗಿಯ ತತ್ವಾದರ್ಶಗಳನ್ನ ನಾವು ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ ಎಂದ ಅವರು, 12ನೇ ಶತಮಾನದಲ್ಲಿನ ಸಾಮಾಜಿಕ ಕ್ರಾಂತಿಗೆ ಶಿವಯೋಗಿ ಸಿದ್ದರಾಮೇಶ್ವರರ ಕೊಡುಗೆ ಗಮನಾರ್ಹ ವಾದುದು. ಅವರು ಅಸಮಾನತೆ,ವರ್ಣ,ಜಾತಿ,ಲಿಂಗಭೇದವನ್ನು ತೊಡೆದು ಹಾಕುವ ಕೆಲಸವನ್ನು ವಚನಗಳ ಮೂಲಕ ಮಾಡಿದವರು. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಮೂರನೇ ಅಧ್ಯಕ್ಷರಾಗಿ ಅವರು ಸಮಾಜದಲ್ಲಿ ಕೆಲಸ ಮಾಡಿದ್ದಾರೆ ಎಂದರು.

ಶಿವಯೋಗಿ ಸಿದ್ಧರಾಮೇಶ್ವರರು 68 ಸಾವಿರ ವಚನಗಳನ್ನು ರಚಿಸಿ ಹಾಡಿದ್ದಾರೆ. ಅವುಗಳ ಪೈಕಿ ಈಗ 1,679 ವಚನಗಳು ಮಾತ್ರ ಲಭಿಸಿವೆ. ಬಸವಣ್ಣ ಹಾಗೂ ಸಿದ್ದರಾಮೇಶ್ವರ ಶಿವಯೋಗಿಗಳು ಶ್ರೇಷ್ಠ ವಚನಕಾರರಾಗಿದ್ದಾರೆ. ಬಸವಣ್ಣನವರು ಸಾಮಾಜಿಕವಾಗಿ ಹೆಚ್ಚು ಒತ್ತು ಕೊಡುತ್ತಿದ್ದರು. ಸಿದ್ದರಾಮೇಶ್ವರರು ಸಮಾಜ ಸೇವೆಯಲ್ಲಿ ತೃಪ್ತಿ ಪಡೆಯುತ್ತಿದ್ದರು ಎಂದು ತಿಳಿಸಿದರು.

ಈ ಸಂಧರ್ಭದಲ್ಲಿ ಭೋವಿ ಸಮಾಜದ ಜಿಲ್ಲಾಧ್ಯಕ್ಷ ಬುಡ್ಡಾರೆಡ್ಡಿ, ತಾಲೂಕು ಅಧ್ಯಕ್ಷ ಮಾರೇಶ್, ಉಪಾಧ್ಯಕ್ಷರಾದ ರಮೇಶ, ಶೇಖರಪ್ಪ, ಹುಲಿಕುಂಟೆಪ್ಪ, ಪ್ರಧಾನ ಕಾರ್ಯದರ್ಶಿ ಡಿ.ಟಿ.ಹನುಮಂತಪ್ಪ, ಗೌರವ ಸಲೆಹಗಾರ ಈಶ್ವರಪ್ಪ, ರಾಷ್ಟ್ರೀಯ ಸಿದ್ದರಾಮೇಶ್ವರ ಭೋವಿಯುವ ವೇದಿಕೆ ಜಿಲ್ಲಾ ಉಪಾಧ್ಯಕ್ಷ ಎಚ್.ವೆಂಕಟೇಶ, ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ಹನುಮಂತಪ್ಪ, ಮೊರಬ ತಿಮ್ಮಣ್ಣ, ಯಂಬಳಿ ವಡ್ಡರಹಟ್ಟಿ ಗ್ರಾಪಂ ಸದಸ್ಯ ವಿರುಪಾಕ್ಷಿ, ಕಟ್ಟಡ ಕಾರ್ಮಿಕರ ಅಧ್ಯಕ್ಷ ಜೆ.ಆಂಜನೇಯ ಸೇರಿದಂತೆ ಅನೇಕರು ಇದ್ದರು.

# ನೀರಾವರಿ ಆರೋಗ್ಯ ಶಿಕ್ಷಣಕ್ಕೆ ಪ್ರಮುಖ್ಯತೆ

### ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿಕೆ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಲ್ಲಿ ವಿವಿಧ ಇಲಾಖೆಗಳಿಂದ ಕೈಗೊಳ್ಳಲಿರುವ ಯಾವುದೇ ಕಾಮಗಾರಿಗಳು ಕಳಪೆ ಮಾಡಿದರೆ ರಾಜಿ ಮಾತೇ ಇಲ್ಲ. ಸಾರ್ವಜನಿಕ ಕೆಲಸ ಉತ್ತಮವಾಗಿರಬೇಕು ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಇಲಾಖೆಗಳ ಅಧಿಕಾರಿಗಳಿಗೂ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

ತಾಲೂಕಿನ ತಂಬ್ರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು. ಸಾರ್ವಜನಿಕರ ಕೆಲಸಗಳಿಗಾಗಿ ಸರ್ಕಾರದಿಂದ ಮಂಜೂರು ಆಗುವ ಹಣ ವ್ಯರ್ಥವಾಗದೆ ಸಾರ್ಥಕವಾಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಗಮನಿಸಬೇಕು. ಪೂರ್ಣಗೊಂಡಿರು ಈ ಆಸ್ಪತ್ರೆಯ ಕಟ್ಟಡ ಕಳಪೆಯಿಂದ ಕೂಡಿದ್ದು, ಯೋಜನೆಯ ಮೊತ್ತ ಬಿಡುಗಡೆಯಾಗದಂತೆ ತಡೆಯಲಾಗುವುದೆಂದು ಪಿಡಬ್ಲೂಡಿ ಅಧಿಕಾರಿಗೆ ಸೂಚಿಸಿದರು. ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಿ, ಉತ್ತಮ ಸೇವೆ ನೀಡಿ ಎಂದು ವೈದ್ಯರಿಗೂ ಮತ್ತು ಸಿಬ್ಬಂದಿಗೂ ತಿಳಿಹೇಳಿದರು.

> ಈ ಭಾಗದ ತಂಬ್ರಹಳ್ಳಿ ಕುದುರೆ ಕಾಲೂವೆ ಏತ ನೀರಾವರಿ ಸೇರಿದಂತೆ ನಾನಾ ಯೋಜನೆಗಳನ್ನು ಜಾರಿಗೊಳಿಸುತ್ತೇವೆ. ಕ್ಷೇತ್ರದಲ್ಲಿ ನೀರಾವರಿಗೆ ಮೊದಲ ಆಧ್ಯತೆ ನೀಡುವ ಜೊತೆಗೆ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚೆಚ್ಚು ಗಮನ ಹರಿಸುತ್ತೇನೆ.
>
> **ಕೆ.ನೇಮಿರಾಜ್‌ನಾಯ್ಕ್**
> ಶಾಸಕರು,
> ಹಗರಿಬೊಮ್ಮನಹಳ್ಳಿ.

ಈ ವೇಳೆ ಗ್ರಾ.ಪಂ.ಅಧ್ಯಕ್ಷೆ ಏಣಿಗಿ ಪೂರ್ಣಿಮ ಹನುಮೇಶ್, ಉಪಾಧ್ಯಕ್ಷೆ ಮ್ಯಾಗಳಮನಿ ರುದ್ರಮ್ಮ ಬಸವರಾಜ, ಸದಸ್ಯರಾದ ಬಣಕಾರ ಬಸಮ್ಮ, ಸಂಡೂರು ಮೆಹಬೂಬ್‌ಸಾಬ್, ಮುಖಂಡರಾದ ಕಿನ್ನಾಳ್ ಸುಭಾಷ್, ಬಣಕಾರ ತೋಟಪ್ಪ, ಜಿ.ಎಂ.ಜಗದೀಶ, ಬಣಕಾರ ಕೊಟ್ರೇಶ್, ಕಡ್ಡಿ ಕೊಟ್ರೇಶ್, ಕಡ್ಡಿ ಚನ್ನಪ್ಪ, ಸೊಬಟಿ ಹರೀಶ್, ಬಣಕಾರ ಮಲ್ಲಿಕಾರ್ಜುನ, ಆನೇಕಲ್ ಶಾಂತಪ್ಪ, ರೋಹಿತ್, ಬ್ಯಾಟಿ ನಾಗರಾಜ್, ಅಕ್ಕಿ ಕೊಟ್ರಬಸಪ್ಪ, ಮೇರಿಗೆರೆ ವಿಶ್ವನಾಥ, ಬಸವರಾಜಪ್ಪ, ತಹಸೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿ, ಪಿಡಬ್ಲೂಡಿ ಎಇಇ ಪುರುಷೋತ್ತಮ, ಪಿಡಿಒಗಳಾದ ತಂಬ್ರಹಳ್ಳಿಯ ಕೃಷ್ಣಮೂರ್ತಿ, ಬನ್ನಿಗೋಳದ ಚನ್ನನಾಯ್ಕ್, ಆರೋಗ್ಯ ಇಲಾಖೆಯ ಕಮಲಮ್ಮ, ಗುರುರಾಜ್,

# ಶಿಕ್ಷಣ ಕರಗದ ಸಂಪತ್ತು

### ಬಿ.ಆರ್.ಪಿ.ಎನ್.ಎಂ ಬಸವರಾಜಯ್ಯ ಹೇಳಿಕೆ | ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿ



■ ಹಂಪಿ ಟೈಮ್ಸ್ ಕೊಟ್ಟೂರು

ಹಣ ಮತ್ತು ಆಸ್ತಿ ಕದಿಯುವ ಸಂಪತ್ತು, ಆದರೆ ವಿದ್ಯೆ ಕದಿಯಲಾಗದ ಸಂಪತ್ತು ಈ ಹಿನ್ನಲೆ ಪೋಷಕರು ಮಕ್ಕಳಿಗೆ ಆಸ್ತಿ ಮಾಡುವುದಕ್ಕಿಂತ, ಮಕ್ಕಳನ್ನ ಆಸ್ತಿವಂತರಾಗಿ ಮಾಡಿ, ಮಕ್ಕಳಿಗೆ ಕಡ್ಡಾಯವಾಗಿ 18 ವರ್ಷದವರೆಗೆ ಶಿಕ್ಷಣ ಕೊಡಿ, ಸಂಪತ್ತಿಲ್ಲದಿದ್ದರು ಪ್ರಪಂಚದಲ್ಲಿ ಎಲ್ಲಿ ಬೇಕಾದರೂ ತಮ್ಮ ಮಕ್ಕಳು ಬದುಕಬಲ್ಲರು ಎಂದು ಬಿ ಆರ್ ಪಿ ಎನ್ ಎಂ ಬಸವರಾಜಯ್ಯ ಹೇಳಿದರು.

ತಾಲೂಕಿನ ರಾಂಪುರ ಗ್ರಾಮದಲ್ಲಿ ಭಾನುವಾರ ಶ್ರೀ ಮತಿ ಕನ್ನಾಕಟ್ಟೆ ಕೊಟ್ರಮ್ಮ ಸಿದ್ದಲಿಂಗಪ್ಪ ಟ್ರಸ್ಟ್, ಆಶ್ರಯದಲ್ಲಿ ನಡೆಯುತ್ತಿರುವ 'ಜ್ಞಾನ ತುಂಗಾ ಹಿರಿಯ ಪ್ರಾಥಮಿಕ ಶಾಲೆ"ಯ 19 ನೇ ವರ್ಷದ ಶಾಲಾ ವಾರ್ಷಿಕೋತ್ಸವದ ಕಾರ್ಯಕ್ರಮದ ಉದ್ಘಾಟನೆ ತರುವಾಯ ಮಾತನಾಡಿದರು.

ಚಿರಿಬಿ ಕ್ಲಸ್ಟರ್ ನ ಸಿ ಆರ್ ಪಿ, ಹೆಚ್‌ಎಂ

ರವಿಕುಮಾರ್ ಮಾತನಾಡಿ ದಾಖಲಾತಿ ಇಲ್ಲದೆ ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಖಾಸಗಿ ಸಂಸ್ಥೆಗಳು ಮುಚ್ಚುತ್ತಿವೆ ಇಂತಹ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಶಿಕ್ಷಣದ ಮೂಲಕ, ಶಾಲೆಯಲ್ಲಿ ಹೆಚ್ಚಿನ ದಾಖಲಾತಿ ಕಾಯ್ದುಕೊಂಡು ಸದಾ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿರುವ ಇಲ್ಲಿನ ಶಿಕ್ಷಕರ ಕಾರ್ಯ ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಶಿಕ್ಷಣ ಸಂಯೋಜಕರಾದ ಎಸ್. ನಿಂಗಪ್ಪ,ಗಜಾಪುರ ಸಿ ಆರ್ ಪಿ, ಕೆ ಸಂದೀಪ,ಸಂಸ್ಥೆಯ ಅಧ್ಯಕ್ಷರು ಕೆ. ವಿವೇಕಾನಂದ ಅವರು ಮಾತನಾಡಿದರು.

ಶಾಲೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಕಂಠಪಾಠ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿತ್ತು.

ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳ ನೃತ್ಯ , ನಾಟಕ, ಪ್ಯಾಶನ್ ಶೋ, ಇಂಗ್ಲಿಷ್ ವರ್ಣ ಮಾಲೆಯ ಎ ಇಂದ ಝು ವರೆಗಿನ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಹೇಳುವುದರ ಜೊತೆಗೆ ಭಾವಚಿತ್ರ ಪ್ರದರ್ಶಿಸಿ,ಶಾಲಾ ವಾರ್ಷಿಕೋತ್ಸವದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನ ಸಂಭ್ರಮದಿಂದ ಮಕ್ಕಳು ಸ್ಮರಿಸಿದರು.

ವೇದಿಕೆಯಲ್ಲಿ ಗ್ರಾಪಂ ಅಧ್ಯಕ್ಷರು ಹೆಚ್.ಎಂ.ಜ್ಯೋತಿ, ಉಪಾಧ್ಯಕ್ಷೆ ಹೆಚ್.ವಿ. ಮಹಾದೇವಿ,ಸಂಸ್ಥೆಯ ಕಾರ್ಯದರ್ಶಿಗಳು ಕೆ. ಕೊಟ್ರೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಕೆ ನಿಜಗುಣ, ರಮೇಶ್, ಬಸವರಾಜ್ ಶಾಲೆಯ ಮುಖ್ಯ ಗುರುಗಳು, ಸಹ ಶಿಕ್ಷಕ ವೃಂದ, ಭೋದಕೇತರ ಸಿಬ್ಬಂದಿ ರಾಂಪುರ ಗ್ರಾಮಸ್ಥರು ಸುತ್ತಮುತ್ತಲಿನ ಊರಿನ ಪೋಷಕ ವರ್ಗದವರು, ಶಾಲೆಯ ವಿಧ್ಯಾರ್ಥಿಗಳು ಹಾಜರಿದ್ದರು.

ಸಹ ಶಿಕ್ಷಕರಾದ ಕೆ ವೀರೇಶ್ ನಿರೂಪಿಸಿದರು ಮುಖ್ಯ ಗುರುಗಳಾದ ಎಂ ನಾಗರಾಜ್ ಪ್ರಾರ್ಥಿಸಿದರು,ಸಹ ಶಿಕ್ಷಕರಾದ ಎಂ ಮಲ್ಲೇಶ್ ಸ್ವಾಗತಿಸಿದರು,ಸಹ ಶಿಕ್ಷಕಿಯಾದ ಸಿ ಕಾವ್ಯ ವಂದಿಸಿದರು.


ಸುದ್ದಿ ಮತ್ತು ಕ್ಲಾಸಿಫೈಡ್ ಮತ್ತು ಡಿಸ್ಲೇ ಜಾಹೀರಾತಿಗಾಗಿ ಹಂಪಿ ಟೈಮ್ಸ್ ಕಚೇರಿಗೆ ಸಂಪರ್ಕಿಸಿ ವಾಲ್ಮೀಕಿ ಸರ್ಕಲ್, ಹೊಸಪೇಟೆ.







# 2.ಕೋಟಿ ವೆಚ್ಚದಲ್ಲಿ ಭವನ ನಿರ್ಮಾಣ

ಮೊದಲ ಪುಟದಿಂದ:

ಬಳ್ಳಾರಿ ನಗರ ಅಥವಾ ಗ್ರಾಮೀಣ ಭಾಗದಲ್ಲಿ ಸ್ಥಳ ಗುರುತಿಸಿದರೆ ಶ್ರೀಘದಲ್ಲಿ ಭೂಮಿ ಪೂಜೆ ನೆರವೇರಿಸಲಾಗುವುದು ಮತ್ತು ನನ್ನ ವೈಯಕ್ತಿಕವಾಗಿ 10 ಲಕ್ಷ ರೂ. ನೀಡುತ್ತೇನೆ ಎಂದರು.

ಸಮುದಾಯದವರಿಗೆ ಕಲ್ಲು, ಬಂಡೆ ಒಡೆಯಲು ಸರ್ಕಾರ ಮತ್ತು ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಸಂಗನಕಲ್ಲು, ಬಂಡಿಹಟ್ಟಿ ಇತರೆ ಪ್ರದೇಶಗಳನ್ನು ಗುರುತಿಸಿ ಸರ್ಕಾರ ನಿಯಮಗಳ ಪ್ರಕಾರ ಅಧಿಕೃತವಾಗಿ ಹಾಗೂ ಮಿತಿಯಾಗಿ ಕಲ್ಲುಬಂಡೆ ಒಡೆಯಲು ಅವಕಾಶ ಕಲ್ಪಿಸಲಾಗುವುದು. ಭೋವಿ ಸಮುದಾಯದವರು ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸದೃಢರಾಗಬೇಕು ಎಂದು ಸಲಹೆ ಮಾಡಿದರು.

ಕಲ್ಲು, ಮಣ್ಣು, ಸಿಮೆಂಟ್ ಹೊತ್ತು ಮನೆ ಕಟ್ಟುವಂತವರು. ನಮ್ಮ ಕಾಲದ ಇಂಜಿನಿಯರ್ ಗಳು ಇವರೇ ಆಗಿರುತ್ತಿದ್ದರು. ಕೇವಲ ತಮ್ಮ ಯುಕ್ತಿಯಿಂದಲೇ ಸಂಪೂರ್ಣ ಮನೆ ಸುಂದರವಾಗಿ ಕಟ್ಟಲು ಅಡಿಪಾಯ ಹಾಕುತ್ತಿದ್ದರು ಎಂದು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ನಿಷ್ಠಿರುದ್ರಪ್ಪ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಸಂತರ ವಿಚಾರ ಹಾಗೂ ಸಾಧನೆಗಳನ್ನು ಪ್ರತಿಯೊಬ್ಬರು ಅನುಕರಣೆ ಮಾಡುವ ಮನೋಭಾವನೆ ಹೊಂದುವಂತಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಜನಪ್ರತಿನಿಧಿಗಳು, ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA